ದೀವಟಿಗೆ

ವಾರಪತ್ರಿಕೆ, ಸಂಪಾದಕ: ಸಿರಿಮನೆ ನಾಗರಾಜ್.

ಏ. ೧೪ ಪ್ರತಿಭಟನಾ ದಿನ

ದೇಶಾದ್ಯಂತ ಹರಿಜನರ ಮೇಲೆ ದೌರ್ಜನ್ಯ ಹತ್ಯಾಕಾಂಡ ನಡೆಯುತ್ತಿದೆ. ಆಗಿಂದಾಗ ತೀವ್ರ ಕ್ರಮ ಕೈಗೊಳ್ಳಬೇಕಾದ, "ದಲಿತೋದ್ಧಾರ"ದ ಸೋಗು ಹಾಕುವ ಸರ್ಕಾರದ ನಿಷ್ಕ್ರಿಯತೆಯನ್ನು ಪ್ರತಿಭಟಿಸುವ ಎರಡನೇ ಹಂತದ ಕಾರ್ಯಕ್ರಮವಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯು ಡಾ|| ಅಂಬೇಡ್ಕರ್ ರವರ ಜನ್ಮದಿನವಾದ ಏ. ೧೪ನ್ನು ಪ್ರತಿಭಟನಾ ದಿನವಾಗಿ ಆಚರಿಸಲಿದೆ. ಅಂದಿನ ದಿನ ಭಾರಿ ಮೆರವಣಿಗೆ, ಸಭೆ ನಡೆಯುತ್ತದೆಂದು ಸಮಿತಿ ಪ್ರಕಟಿಸಿದೆ.

ಖಾಸಗಿ ಪ್ರಸಾರಕ್ಕೆ | ಕೊಪ್ಪ ೨೮-೩-೮೨ ಭಾನುವಾರ | ೧೨

ವಿದ್ಯಾರ್ಥಿನಿಯನ್ನು ಅಡ್ಡಗಟ್ಟಿದ ಮತ್ತೊಂದು ಪ್ರಕರಣ

ಹರಿಹರಪುರ: ಮಾವಿನಕಟ್ಟೆ, ಬಳಿ ಇತ್ತೀಚೆಗೆ ಶಾಲಾ ವಿದ್ಯಾರ್ಥಿನಿಯರನ್ನು ಅಡ್ಡಗಟ್ಟಿ ಮಾಚು, ಸರ ಅಪಹರಿಸಲು ಯತ್ನಿಸಿದ ಪ್ರಕರಣ ಇನ್ನೂ ಹಸಿಯಾಗಿರುವಾಗಲೇ ಮಾ. ೨೭ರಂದು ಹರಿಹರಪುರ–ಬೊಮ್ಲಾಪುರ ಮಧ್ಯದರಸ್ತೆಯಲ್ಲಿ ವಿದ್ಯಾರ್ಥಿನಿಯೊಬ್ಬಳನ್ನು ಒಬ್ಬ ಅಡ್ಡಗಟ್ಟಿದ ಪ್ರಕರಣ ವರದಿಯಾಗಿದೆ.

ಶಾಲಾ ಮಕ್ಕಳು ನಿರ್ಭೀತಿಯಿಂದ ಓಡಾಡಲಾರದಾಗಿದ್ದು ಪೋಷಕರು ಭಯಭೀತರಾಗಿದ್ದಾರೆ. ಇದು ಪೋಲೀಸರ ನಿಷ್ಕ್ರಿಯತೆ, ಜನರ ನೈತಿಕತೆಯ ಅಧಃಪತನಗಳ ಕಾರಣವಾಗಿವೆ ಎಂದು ಜನ ಹೇಳುತ್ತಿದ್ದಾರೆ. ಈ ದಿಕ್ಕಿನಲ್ಲಿ ಸಾರ್ವಜನಿಕರೂ, ರಕ್ಷಣಾಧಿಕಾರಿಗಳೂ ಗಮನ ಹರಿಸಬೇಕಿದೆ.

ಎರಡನೆಯ ಈ ಪ್ರಕರಣದ ಉದ್ದೇಶ ಬಲಾತ್ಕಾರವೇ ಇರಬೇಕೆಂದು ಶಂಕಿಸಲಾಗಿದ್ದು ವಿದ್ಯಾರ್ಥಿನಿ ಕಿರುಚಿದಾಗ ಆ ವ್ಯಕ್ತಿ ಪರಾರಿಯಾದನೆನ್ನಲಾಗಿದೆ.

ಏ. ೭ರಂದು ಕೊಪ್ಪ ತಾ. ಅ. ಮಂ. ವಿಶೇಷ ಸಭೆ

ಕೊಪ್ಪ: ಇಲ್ಲಿನ ತಾಲ್ಲೂಕು ಅಭಿವೃದ್ಧಿ ಮಂಡಳಿಯ ವಿಶೇಷ ಸಭೆಯನ್ನು ಏ. ೭ರ ಬುಧವಾರ ಮಧ್ಯಾಹ್ನ ೩ ಗಂಟೆಗೆ ತಾ. ಅ. ಮಂ ಕಚೇರಿಯ ಸಭಾಂಗಣದಲ್ಲಿ ಕರೆಯಲಾಗಿದೆ. ಸದಸ್ಯರೆಲ್ಲರೂ ಸಕಾಲದಲ್ಲಿ ಸಭೆಗೆ ಹಾಜರಾಗಬೇಕೆಂದು ಕೋರಿದೆ.

ಆರೋಪ — ನಿರಾಕರಣೆ

ಹಾಲ್ಮುತ್ತೂರು: ಹರಿಹರಪುರದಿಂದ ಕೊಪ್ಪ ತಾ|| ಅ|| ಮಂಡಳಿ ಸದಸ್ಯರಾಗಿ ಆಯ್ಕೆಯಾಗಿರುವ ಹೆಚ್. ಕೊಲ್ಲಪ್ಪ ಗೌಡರು ಸ್ವಾರ್ಥ ಮತ್ತು ಸ್ವಜನ ಪಕ್ಷಪಾತದಲ್ಲಿ ತೊಡಗಿದ್ದಾರೆಂದು ಹಾಲ್ಮುತ್ತೂರಿನ ಕೆಲವರು ಆಪಾದಿಸಿದ್ದಾರೆ. ಗೌಡರು ಈ ಆರೋಪಗಳನ್ನು ಅಲ್ಲಗಳೆದಿದ್ದಾರೆ.

ಆರೋಪ

ನಾಲ್ಕು ವರ್ಷಗಳ ಹಿಂದೆ ಕೊಲ್ಲಪ್ಪ ಗೌಡರು ತಮ್ಮ ಸೋದರನ ಹೆಸರಿನಲ್ಲಿ ಹಾಲ್ಮುತ್ತೂರು ಸರ್ವೆ ನಂ ೩೫ ರ ಸರ್ಕಾರಿ ಜಾಗದಲ್ಲಿ ಯಾವ ಮಂಜೂರಾತಿ ಇಲ್ಲದೆ ಅಂಗಡಿ ಕಟ್ಟಿಸಿ, ೧ ಎಕರೆ ಜಾಗಕ್ಕೆ ಬೇಲಿ ಹಾಕಿಸಿ ತೆಂಗಿನ ಸಸಿ ನಡೆಸಿದರು. ಇದನ್ನು ವಿರೋಧಿಸಿದ ಊರಿನ ಕೆಲವು ಯುವಕರ ಪ್ರಯತ್ನವನ್ನು ತಮ್ಮ ಎಲ್ಲ ಪ್ರಭಾವಗಳನ್ನು ಉಪಯೋಗಿಸಿ ವಿಫಲಗೊಳಿಸಿದ್ದರು ಎಂಬುದು ಮೊದಲ ಆರೋಪ.

ಈಗ, ಗ್ರಾಮೀಣ ನೀರಾವರಿಗಾಗಿ ಸರ್ಕಾರ ಮಂಜೂರು ಮಾಡಿರುವ ಕೊಳವೆ ಬಾವಿಯನ್ನು ಅಗತ್ಯ ಇರುವ ಎಷ್ಟೋ ಕಡೆ ಬಿಟ್ಟು, ಅವರ ಸದರಿ ತೆಂಗಿನ ತೋಟಕ್ಕೆ ಅನುಕೂಲವಾಗುವಂತೆ ತೋಡಿಸಲು ತೊಡಗಿದಾಗ ಮಾ. ೧೩ ರಂದು ಊರಿನ ಅನೇಕರು ಅದನ್ನು ಪ್ರತಿಭಟಿಸಿದರು. ಅವಕ್ಕೆ ಅವರು, ಮಂತ್ರಿ ಬೇಗಾನೆ ರಾಮಯ್ಯನವರು ಇದೇ ಜಾಗದಲ್ಲಿ ತೋಡಿಸುವಂತೆ ಹೇಳಿದ್ದಾರೆಂದು ಮಂತ್ರಿಗಳ ಹೆಸರಿಗೆ ಮಸಿ ಬಳಿಯಲು ಪ್ರಯತ್ನಪಟ್ಟರು. ಅಷ್ಟೇ ಅಲ್ಲದೆ ಶಾಸಕ ಮರುದಿನವೇ ಮಂತ್ರಿಗಳು ಕೊಪ್ಪ ತಾ|| ಅ|| ಮಂಡಳಿಗೆ ಭೇಟಿ ಕೊಟ್ಟಿದ್ದಾಗ ಊರಿನ ಸುಮಾರು ೫೦ ಜನರ ನಿಯೋಗ ಅವರನ್ನು ಭೇಟಿಯಾಗಿ, ಕೊಲ್ಲಪ್ಪಗೌಡರ ಸಮ್ಮುಖದಲ್ಲೇ ಈ ವಿಷಯ ಚರ್ಚಿಸಿತು. ಇದರಿಂದ ಗೌಡರು ಮಂತ್ರಿಗಳೆದುರು ತಲೆ ತಗ್ಗಿಸುವಂತಾಯಿತು ಎಂಬುದು ಎರಡನೆಯ ಆರೋಪ.

ನಿರಾಕರಣೆ

ಈ ಬಗ್ಗೆ ಕೊಲ್ಲಪ್ಪ ಗೌಡರನ್ನು ಭೇಟಿ ಮಾಡಿದಾಗ ಅವರು ಈ ಆಪಾದನೆಗಳನ್ನೆಲ್ಲ ಅಲ್ಲಗಳೆದರು.

ಜನ ಪ್ರತಿನಿಧಿಯಾಗಿ ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡುವಾಗ ಊರಿನ ಮನೆಗೆ ಉಪಯೋಗವಾಗಬೇಕು. ಅದರಲ್ಲಿ ನಮ್ಮ ಬಂಧು-ಬಳಗದ ಕೆಲವರಿಗೆ ಅನುಕೂಲವಾದರೆ ತಪ್ಪೇ? ಎಂದು ಅವರು ಕೇಳುತ್ತಾರೆ.

(೪ನೇ ಪುಟ ನೋಡಿ)

ಬೇಗಾನೆ ರಾಮಯ್ಯ ಭೇಟಿ: ೨೦ ಅಂಶ ಕಾರ್ಯಕ್ರಮದ ಸಭೆ

ಕೊಪ್ಪ: ಇಲ್ಲಿಗೆ ಮಾ. ೧೪ರಂದು ಭೇಟಿ ಕೊಟ್ಟಿದ್ದ ಮಂತ್ರಿ ಬೇಗಾನೆ ರಾಮಯ್ಯನವರು ತಾ|| ಅ|| ಮಂಡಳಿಗೂ ಭೇಟಿ ಕೊಟ್ಟು, ವಿವಿಧ ಕಾರ್ಯಕ್ರಮಗಳ ಪರಿಶೀಲನೆ ನಡೆಸಿದರು.

೨೦ ಅಂಶ ಕಾರ್ಯಕ್ರಮದ ಸಭೆಯಲ್ಲಿ ಎಲ್ಲ ಇಲಾಖೆಗಳ ಅಧಿಕಾರಿಗಳ ಜೊತೆ ಚರ್ಚಿಸಿದ ಅವರು, ೨೦ ಅಂಶ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ನಿರ್ದೇಶನಗಳನ್ನು ಕೊಟ್ಟರು.

ಉದ್ಯೋಗ ಖಾತ್ರೀಕರಣ ಯೋಜನೆ ಮುಂತಾದವುಗಳಲ್ಲಿ ತಾ. ಅ. ಮಂಡಳಿಯ ಪ್ರಗತಿಯನ್ನು ಅವರು ಮೆಚ್ಚಿಕೊಂಡಿದ್ದಾಗಿ ಅಧ್ಯಕ್ಷ ಬಿ. ಜಿ. ಚಿದಂಬರ್ ತಿಳಿಸಿದ್ದಾರೆ.

ಓದುಗರಲ್ಲಿ ....

'ದೀವಟಿಗೆ' ತಡವಾಗಿ ಬರುತ್ತಿದೆ ಎಂದು ಕೆಲವರಿಗೆ ಅಸಮಾಧಾನವಿರಬಹುದು. ಅದು ನಿಜ. ಈಚಿನ ಒಂದೆರಡು ವಾರಗಳಲ್ಲಂತೂ ವಿಪರೀತ ತಡವಾಗಿವೆ. ಅದು ಕೆಲವು ಕಡೆ ತಲುಪುವಾಗ ೧ ವಾರವೇ ತಡವಾಗಿರಬೇಕು.

ಈಗ ಮುದ್ರಣಾಲಯಗಳಲ್ಲಿ ಬಿಡುವಿಲ್ಲದಷ್ಟು ಕೆಲಸದ ಸಮಯ. ಸಾಲದ್ದಕ್ಕೆ ವಿದ್ಯುಚ್ಛಕ್ತಿಯ ವಿಪರೀತ ತೊಂದರೆ. ವಾರಕ್ಕೆರಡು ದಿನ ಮೂರು–ನಾಲ್ಕು ಗಂಟೆ ನಿಲುಗಡೆ, ಪ್ರತಿದಿನ ಸಂಜೆ ೬ರಿಂದ ರಾತ್ರಿ ೧೦ರವರೆಗೆ (ಬಿಗಿ ಕೆಲಸದ ಸಮಯ) ಮೋಟರು ಬಳಸಲು ಅನುಮತಿಯಿಲ್ಲದಿರುವುದು, ಇದರ ಮೇಲೆ ಆಗಿಂದಾಗ್ಗೆ ವಿದ್ಯುತ್ ಸರಬರಾಜು ಕಡಿತಗೊಳ್ಳುವುದು–ಹೀಗೆ ಅಡಚಣೆಯ ಸಾಲೇ ಇದೆ. ಸರಿಯಾದ ಸೌಲಭ್ಯಗಳಿಲ್ಲದ ಈ ಚಿಕ್ಕ ಊರಲ್ಲಿ ಇಷ್ಟೆಲ್ಲ ಅಡ್ಡಿ ದಾಟಿ ವಾರಕ್ಕೊಮ್ಮೆ ಪತ್ರಿಕೆ ಹೊರತರುವುದು ಬಹಳ ಪ್ರಯಾಸದ್ದಾಗುತ್ತಿದೆ. ಆದರೂ ಅದನ್ನು ಹೇಗಾದರೂ ದಾಟಲೇಬೇಕೆಂಬ ಉದ್ದೇಶ ನಮ್ಮದು.

ಇದಕ್ಕಾಗಿ ನಮ್ಮ ಮುದ್ರಣ ವ್ಯವಸ್ಥೆಯನ್ನು ಉತ್ತಮಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇವೆ. ಎಲ್ಲ ಒಂದು ಹದ್ದುಬಸ್ತಿಗೆ ಬಂದ ಮೇಲೆ ಪತ್ರಿಕೆಯ ಪ್ರಕಟಣೆ ಸಮಯಕ್ಕೆ ಸರಿಯಾಗಿ ಆಗುತ್ತದೆ. ಅಲ್ಲಿಯವರೆಗೆ, ಕ್ಷೀರವೇ ಇಲ್ಲವೇ ಬರೀ ನೀರೇ ಇದ್ದಾಗಲೂ 'ಹಂಸಕ್ಷೀರ ನ್ಯಾಯ' ಬಳಸಲು ಬಲ್ಲ ನೀವು, 'ದೀವಟಿಗೆ'ಯ ಜೊತೆಗೂ ಸ್ವಲ್ಪ ಸುಧಾರಿಸುವುದಿಲ್ಲವೆ?

ಪತ್ರಿಕೆಯಂತೂ ನಾವೆಷ್ಟು ಪ್ರಯತ್ನಪಟ್ಟರೂ ತಡವಾಗುತ್ತಿದೆ. ಆದರೆ ಅದನ್ನು ಎಲ್ಲ ಕಡೆಗೂ ಕರಾರುವಾಕ್ಕಾಗಿ ಕಳಿಸುತ್ತಿದ್ದೇವೆ. ಅಪ್ಪರಿಂದ ಯಾರಿಗಾದರೂ ಪತ್ರಿಕೆ ತಲುಪಿಲ್ಲವಾದರೆ. 'ಕಳಿಸಿಲ್ಲವೇನೋ' ಅಂತಲೋ, 'ನಿಂತು ಹೋಯಿತೇನೋ' ಅಂತಲೋ ಯೋಚಿಸಬೇಡಿ. ಬೇಕಿದ್ದರೆ ಒಂದೆರಡು ದಿನ ಹೆಚ್ಚಿಗೆ ಕಾದು ನೋಡಿಯಾದರೂ ನಿಮ್ಮ ಅಂಚೆ ವ್ಯವಸ್ಥೆಯಲ್ಲಿ ವಿಚಾರಿಸಿ. ತಲುಪಿಲ್ಲವಾದರೆ ನಮಗೆ ತಿಳಿಸಿ. ಏನಾಗಿದೆಯೆಂದೂ ತಿಳಿಯಲು ನಾವೂ ಪ್ರಯತ್ನಿಸುತ್ತೇವೆ.

ಕಡೆಯದಾಗಿ—

ಈ ಮಾತನ್ನು ಮತ್ತೊಮ್ಮೆ ಹೇಳುತ್ತೇವೆ— 'ದೀವಟಿಗೆ' ನಿಮ್ಮದಾಗಬೇಕು. ನಿಮ್ಮ ಕಷ್ಟ-ಸುಖ, ಸಾಧನೆ–ವಿಫಲತೆ, ಹೋರಾಟ–ಸಂಧಾನಗಳ ಅನುಭವ—ಇವುಗಳನ್ನು ನಾಲ್ಕು ಕಡೆಯ ನಿಮ್ಮಂಥವರ ಜೊತೆ ಹಂಚಿಕೊಳ್ಳುವ ಸಾಧನವಾಗಬೇಕು. ಇದು ಪ್ರಾಮಾಣಿಕವಾದ ಯಾವುದೇ ಪತ್ರಿಕೆಯ ಆಶಯವಾಗಿರುತ್ತದೆ. ಹಾಗಾಗಬೇಕಾದರೆ, ನೀವು ಹೇಳಬೇಕಾಗಿರುವುದನ್ನು ನೀವೇ ಬರೆಯಬೇಕು. ನಾವು ಎಷ್ಟೋ ಕಡೆಯ ವಿಷಯ ಸಂಗ್ರಹಿಸಬಹುದು, ಎಷ್ಟೋ ಸಮಸ್ಯೆಗಳನ್ನು ಗುರುತಿಸಿ, ಬರೆಯಬಹುದು. ಆದರೂ ಅದು ಅಪೂರ್ಣವೇ. ಒರಿಯ ಪತ್ರಿಕೆಯಲ್ಲಿ ಬರೆದ ಮಾತ್ರಕ್ಕೆಲ್ಲ ಸಮಸ್ಯೆ ಬಗೆಹರಿದು ಬಿಡುವಷ್ಟು ಸುಲಭದ ಕಾಲವಲ್ಲ ಈಗ. ಒಂದೊಂದು ಸಮಸ್ಯೆಯ ಬಗೆಗೂ ಅದನ್ನನುಭವಿಸುವವರ ಸಂಘಟನೆಯ ಪ್ರಯತ್ನ ಬೇಕು; ಹಿಂಬಾಗಿಲು ವ್ಯವಹಾರ ಬಿಟ್ಟು, ನೇರವಾಗಿ, ಒಟ್ಟಾಗಿ ಸಮಸ್ಯೆ ಬಗೆಹರಿಸಿಕೊಳ್ಳಬೇಕೆನ್ನುವ ತಿಳುವಳಿಕೆ ಜನರಲ್ಲಿ ಹಬ್ಬಬೇಕು, ನಿಜ. ಆದರೂ, ಏನೂ ಆಗುವುದಿಲ್ಲ ಎನ್ನುವ ಮಟ್ಟಕ್ಕೂ ಇನ್ನೂ ಹೋಗಿಲ್ಲವೆನ್ನಬಹುದು. ಏನಿಲ್ಲದಿದ್ದರೂ, ಸಂಘಟನೆಗೆ, ಒಗ್ಗಟ್ಟಿಗೆ ಅನುಕೂಲವಾಗಲು ಅಭಿಪ್ರಾಯಗಳ ವಿನಿಮಯ, ಮಾಹಿತಿ–ಅನುಭವಗಳ ವಿನಿಮಯವಾದರೂ ಆಗಬೇಕಲ್ಲ. ಇದಕ್ಕಾದರೂ ನೀವು 'ಬಾಯಿ' ತೆರೆಯಲೇ ಬೇಕು!

ಹೀಗೆಂದಾಗ ಒಂದು ವಿನಂತಿ— ಸಣ್ಣ ಪುಟ್ಟ ವೈಯಕ್ತಿಕ ವಿಷಯಗಳನ್ನು, ಜಗಳಗಳನ್ನು ದೊಡ್ಡದು ಮಾಡಿ ಬರೆಯಬೇಡಿ. (ದೊಡ್ಡದಾಗಬಹುದಾಗಿದ್ದ ಅಂಶವನ್ನು ಸಣ್ಣದರಲ್ಲೇ ಬಗೆಹರಿಸಿದರೆ ಬರೆಯಿರಿ) ಹತ್ತಾರು ಜನರ ಸಮಸ್ಯೆ ಎನಿಸಿದ್ದನ್ನು ಬರೆದು ಬೆಳಕಿಗೆ ತನ್ನಿ.

ಒಟ್ಟಿನಲ್ಲಿ—ಮೂಕ ಪ್ರಭುಗಳಿಗೆ ದನಿ ನೀಡಿ. ಯೋಚಿಸಿ. ಬಾಯಿಬಿಡಿ.

— ಸಂಪಾದಕ.

'ಅಂಕುರ'ದಿಂದ ಅಂದಗಾರಿನಲ್ಲಿ ನಾಟಕ

ಅಂದಗಾರು: ಇಲ್ಲಿನ ಶ್ರೀ ಲಕ್ಷ್ಮೀನಾರಾಯಣ ಸ್ವಾಮಿ ದೇವಸ್ಥಾನದ ವಾರ್ಷಿಕೋತ್ಸವದ ಪ್ರಯುಕ್ತ ಏ. ೩ರಂದು ರಾತ್ರಿ ಕೊಪ್ಪದ 'ಅಂಕುರ' ತಂಡದವರು [illegible] ನಾಟಕಗಳನ್ನು ಆಡಲಿದ್ದಾರೆ.

ಅಡಿಕೆ ಬೆಳೆಗಾರರ ಬಗ್ಗೆ ಒಂದು ಸಮೀಕ್ಷೆ

ಹೋ, ನಮಸ್ಕಾರ. ಯಾವಾಗ್ಬಂದ್ರಿ? ಅಂದ್ಹಾಗೆ ನೆನ್ನೆ ನಿಮ್ಮ ಕಡೆ ಹೋಗಿದ್ದಿ. ನೀವಿಲ್ಲಾಂತ ತಿಳೀತು. ಏನ್ಸಮಾಚಾರ?

ಶಿವಮೊಗ್ಗಕ್ಕೆ ಹೋಗಿದ್ದೆ ....

ತಿಳೀತು. ಅಡ್ಕೆ ಹೇಗಾಯ್ತು? ಇಷ್ಟಕ್ಕೂ ನೀವೇನ್ಸ್ವಾಮಿ, ನೀವೇ ರಾಜರು! ಪುಣ್ಯವಂತರು ಸ್ವಾಮಿ .... ಅಂದ್ಹಾಗೆ.... ಹೆಡ್ ಕ್ವಾರ್ಟರ್ಸ್‌ನಲ್ಲಿ ಒಂದು ಸ್ಟೇಡಿಯಂ ಆಗಬೇಕಾಗಿದೆ. ನೀವೆಲ್ಲ ಶಕ್ತಿ ಮೀರಿ ಸಹಕರಿಸಬೇಕು ಸ್ವಾಮಿ. ನಮಗೆಲ್ಲ ಟಾರ್ಗೆಟ್ ಫಿಕ್ಸ್ ಮಾಡಿಬಿಟ್ಟಿದ್ದಾರೆ. ದೊಡ್ಡ ತಲೆನೋವಾಗಿಬಿಟ್ಟಿದೆ. ನೀವೆಲ್ಲ ಇರಬೇಕಾದ್ರೆ ನಮಗೇನೂ ಭಯವಿಲ್ಲಾಂತ ಇಟ್ಕೊಳ್ಳಿ. ನಿಮಗೆಲ್ಲ ಇದು ಯಾವ ಲೆಖ್ಖ? ಜ.ಜ.ಬಿ ವ್ಯವಹಾರ. ಏನಂತೀರಾ?

....

ದಿನನಿತ್ಯ ಸಾಮಾನ್ಯವಾಗಿ ಕಾಣುವ ದೃಶ್ಯ ಇದು. ಅಧಿಕಾರಿಗಳ, ಸಂಘಸಂಸ್ಥೆಗಳ ದೃಷ್ಟಿಯಲ್ಲಿ ರೈತ (ಅದರಲ್ಲೂ ಅಡಿಕೆ, ಕಾಫಿ ಬೆಳೆಗಾರ) ಎಂದರೆ ಬಂಗಾರದ ಮೊಟ್ಟೆ ಇಡುವ ಬಾತುಕೋಳಿ.

ರೈತನಿಗೆ ಮನ ನೋಯುತ್ತದೆ. ಏಕೆಂದರೆ ಅವನ ವ್ಯವಹಾರದ ರೀತಿಯೇ ಬೇರೆ! ಎಲ್ಲರಿಗೂ ಬಗ್ಗಿ ನಡೆಯುವವನ್ನರಲ್ಲಿ ಸುಸ್ತು. "ಮುಸುಕಿನೊಳಗಿನ ಗುದ್ದು" ಎಂದ ಹಾಗೆ.

ಇದರಲ್ಲಿ ಅಡಿಕೆ ಬೆಳೆಗಾರರ ವಿಷಯ ಸದ್ಯಕ್ಕೆ ಚಿಂತಿಸೋಣ. ಸಣ್ಣ ಹಿಡುವಳಿಯವನಿಗೆ (೨ ಎಕ್ರೆ ತೋಟದ ಒಳಗಿನವ) ಸರಾಸರಿ ಎಕ್ರೆಗೆ ೪ ರಿಂದ ೬ ಕ್ವಿಂಟಾಲ್ ಉತ್ಪತ್ತಿಯಾಗಿ ವಾರ್ಷಿಕ ನಿವ್ವಳ ಆದಾಯ ೨ ರಿಂದ ೬ ಸಾವಿರ ರೂಪಾಯಿ ಮಾತ್ರ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಇದರಲ್ಲಿ ಅವನ ಕುಟುಂಬ ನಿರ್ವಹಣೆಯಲ್ಲದೇ ತನ್ನ 'ಪೊಳ್ಳು ದೊಡ್ಡಸ್ತಿಕೆ'ಯನ್ನೂ ತೋರಿಸಿಕೊಳ್ಳಬೇಕು. ನಿಗದಿಯಾದ ವರಮಾನವಿಲ್ಲ. ಕೊಳೆ ರೋಗದ ಭೂತ, ಅನರ್ಥ ಪರಂಪರೆಗಳು, ವಿಶೇಷ ಖರ್ಚುಗಳನ್ನು ಎದುರಿಸಿ ಸಂಸಾರ ಸಾಗಿಸಿ ಮುಂದಿನ ಬೆಳೆಯನ್ನು ಆತ ಎದುರು ನೋಡುತ್ತಲೇ ಇರುತ್ತಾನೆ. ಇವನನ್ನು ತಮ್ಮ ಮುಷ್ಟಿಯಲ್ಲಿರಿಸಿಕೊಳ್ಳಲು ಸಮಾಜದ ಬಂಡವಾಳಶಾಹಿಗಳೂ ಕಾದಿರುತ್ತಾರೆ. ವಾಸ್ತವವಾಗಿ ಶೇ. ೯೦ ಭಾಗ ಜನರು ಧಾರಾಳವಾಗಿ ಸಾಲ ಮಾಡುತ್ತಾರೆಂದರೆ ಅತಿಶಯೋಕ್ತಿಯಲ್ಲ. ಕೃಷಿ ಕಾರ್ಮಿಕನ ವಿನಃ ಇತರ ಯಾವುದೇ ವ್ಯಕ್ತಿಯ (ವ್ಯಾಪಾರ, ಹೋಟೆಲ್ ಉದ್ಯಮ, ನೌಕರವರ್ಗ ಇತ್ಯಾದಿ) ವ್ಯವಹಾರಗಳನ್ನು ಗಮನಿಸಿದಾಗ ಅಡಿಕೆ ಬೆಳೆಗಾರನ ಮಟ್ಟ ತೀರಾ ಕಳಪೆ. ಮನೆ ತಾಪತ್ರಯಗಳನ್ನು ನೀಗಿಸುವ ಸಲವಾಗಿ ಆತ ತನ್ನ ವ್ಯಕ್ತಿತ್ವವನ್ನೇ ಮಾರಾಟ ಮಾಡಬೇಕಾಗುವುದು! ಮನೆಯ ಸದಸ್ಯರಿಗಿಂತ ತನಗಾಗಿ ಕೆಲಸ ಮಾಡುವವರಿಗೇ ಆತ ಹೆಚ್ಚು ಗಮನ ನೀಯುತ್ತಾನೆ. ಈ ಮಾತು ನಿಷ್ಠುರ ಸತ್ಯ.

ವಾಸ್ತವವಾಗಿ ಪಟ್ಟಣದವರ ಮನೆಯ ಒಂದು ಬಚ್ಚಲುಮನೆಯ ವೈಭವ ಹಳ್ಳಿಯ ಇಡೀ ಮನೆಯ ಬೆಲೆ ಎಂದರೆ ತಪ್ಪಾಗದು! ನೀವು ಗಮನಿಸಿ ನೋಡಿ– ಅವನ ಆಹಾರ, ಉಡುಗೆ, ವಿದ್ಯಾಭ್ಯಾಸ, ಆರೋಗ್ಯ– ಎಲ್ಲದರಲ್ಲೂ ಕಡಿತ. ಸಮಾಜ ಸ್ವಾರ್ಥಕ್ಕಾಗಿ ಆತನನ್ನು ಬಳಸಿಕೊಳ್ಳುತ್ತಿದೆ. ಸದಾ 'ಮಾನವೇನು?' ಎಂಬ ಚಿಂತೆಯಲ್ಲಿಯೇ ಎಲ್ಲರಿಗೂ ಹೆದರಿ ನಡೆಯುತ್ತಿರುತ್ತಾನೆ. ಆದರೆ ಇದನ್ನು ಬಹಿರಂಗವಾಗಿ ಒಪ್ಪಿಕೊಳ್ಳುವುದಿಲ್ಲ. ಆತ್ಮವಂಚನೆ. ಈಮಧ್ಯೆ ಅಂಧಶ್ರದ್ಧೆ, ಕಂದಾಚಾರಗಳಿಗೂ ಬಲಿಯಾಗಿ, "ಹುಲಿಯ ಬಣ್ಣಕ್ಕೆ ನರಿ ಮೈ ಸುಟ್ಟುಕೊಂಡಿತು" ಎಂಬಂತೆ ಮೇಲು ವರ್ಗದವರ ಅನುಕರಣೆ ಮಾಡಲು ಹೋಗಿ ತನ್ನ ವ್ಯಕ್ತಿತ್ವವನ್ನೇ ಕಳೆದುಕೊಳ್ಳುತ್ತಾನೆ. ಇದಕ್ಕೆ ಅನ್ಯರನ್ನು ಹಳಿದು ಉಪಯೋಗವಿಲ್ಲ. ಸ್ವಯಂಕೃತಾಪರಾಧ.

ಕಾಫಿ ಬೆಳೆಗಾರನ ದೃಷ್ಟಿಯೆಲ್ಲಾ ತನ್ನ ತೋಟದ ಬಗ್ಗೆ ಕೇಂದ್ರೀಕೃತ. ಕಟ್ಟುಪಾಡಿನ–ಶಿಸ್ತಿನ ಚೌಕಟ್ಟಿನಲ್ಲಿಯೇ ಅವನ ಬದುಕು. ಆರ್ಥಿಕವಾಗಿ ಕಾಫಿ ಬೋರ್ಡು ಈತನಿಗೆ ನಿರ್ವಂಚನೆಯ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ. ಕಾಫಿ ಬೆಳೆಗಾರನಿಗೆ ಯಾವುದೆ ತೊಂದ್ರೆಯಾದರೂ "ಬೋರ್ಡು" ಅವನನ್ನು ಬಿಟ್ಟುಕೊಡುವುದಿಲ್ಲ. ಇದೇ ವಿಶೇಷ. ಆದರೆ ಅಡಿಕೆ ಬೆಳೆಗಾರನು ಈ ಸವಲತ್ತುಗಳಿಂದ ವಂಚಿತ. ಒಮ್ಮೆ ಕೆಳಗೆ ಬಿದ್ದರೆ ಎಲ್ಲಾ ತುಳಿದು ಹೋದಾರೇ ಹೊರತು, 'ನೀನು ಏಕೆ ಬಿದ್ದೆ?' ಎಂದು ಕೇಳುವುದಿಲ್ಲ.

ಅನಿಶ್ಚಿತ ಉತ್ಪನ್ನ, ಅನಿಶ್ಚಿತ ಧಾರಣೆ, ಅನಿಶ್ಚಿತ ವೆಚ್ಚ. ೧ ಸರ್ಕಾರದ ದೃಷ್ಟಿಯಲ್ಲಿ "ಈತ ಏನೇ ತೊಂದರೆಯಾದರೂ

ಬಿ. ಕೆ. ಶೇಷಗಿರಿಯಪ್ಪ,
ಮಘೇಗೈಲು

ಸಹಿಸಬಲ್ಲ ವ್ಯಕ್ತಿ! ಇವನಿಂದ ಎಷ್ಟು ಸುಲಿಗೆ ಮಾಡುವುದೇ ಸರಿ. ಸಲಿಗೆ ಕೊಡಬಾರದು." ೨ ಕೂಲಿಗಾರರ ದೃಷ್ಟಿಯಲ್ಲಿ "ನಾವು ದುಡಿಯುವುದರಿಂದ ತಾನೇ ಇವನ ಜೀವನ! ಇನ್ನೂ ಕೊಡಲಿ–ಮತ್ತೂ ಕೊಡಲಿ. ಕೊಡದೆ ಏನು?" ೩ ಸಮಾಜದ ದೃಷ್ಟಿಯಲ್ಲಿ:– ನೀವುಗಳೇ ಸಹಾಯ ಮಾಡದೇ ಮತ್ಯಾರು ಮಾಡಬೇಕ? ನೀವೇ ದೇಶದ ಬೆನ್ನೆಲುಬು. ನಿಮ್ಮದೇ ಜವಾಬ್ದಾರಿ ತಾನೆ?-ಯಾರಿಗೆ ಬೇಕು ಈ ತಾಪತ್ರಯಗಳು! ನೀವು ಗಮನಿಸಿರಿ– ಹೆಚ್ಚು ಭಾಗ ರೈತರು ಇತ್ತೀಚಿಗೆ ಕಾರಖಾನೆಗಳನ್ನೋ, ವ್ಯಾಪಾರವನ್ನೋ ಅಥವಾ ನೌಕರಿಯನ್ನೋ ಅವಲಂಬಿಸಿ ಪಟ್ಟಣದ ಕಡೆಗೆ ಧಾವಿಸುತ್ತಿದ್ದಾರೆ. ಆದರೂ ನಾವು ರಾಜರು!!

ಹಾಗಾದರೆ ಅಡಿಕೆಯ ಬೆಳೆ ಬೇಡವೇ? ಈ ತೊಂದರೆಗಳಿಗೆ ಕಾರಣರಾರು? ನಿವಾರಣೆಯಿಲ್ಲವೇ? ವಿಚಾರ ಮಾಡೋಣ.

"ಅಡಿಕೆ ಆಹಾರ ಪದಾರ್ಥವಲ್ಲದ್ದರಿಂದ ಇದು ಒಂದಲ್ಲ ಒಂದು ದಿನ ಕೈ ಕೊಡುವುದೇ. ಆದ್ದರಿಂದ ಕ್ರಮೇಣ ಇದರ ಬೆಳೆ ಕಮ್ಮಿ ಮಾಡುವುದು ಸೂಕ್ತ" ಎನ್ನುತ್ತಾರೆ ಕೆಲವರು. ಆದರೆ ಇದು ಸರಿಯಲ್ಲ. ಅಡಿಕೆಯ ಬಗ್ಗೆ ವೇದ-ಪುರಾಣಗಳಲ್ಲಿ ಸಾಕಷ್ಟು ಗೌರವದ ಉಲ್ಲೇಖವಿದೆ. 'ಒಕ್ಕಣ್ಣ ಮುಕ್ಕಣ್ಣರಿಂದ (ಅಡಿಕೆ-ತೆಂಗು) ಇಕ್ಕಣ್ಣನಿಗೆ (ಮನುಷ್ಯನಿಗೆ) ಹಿತವಿದೆ' ಎಂದು ಹಿರಿಯರು ಹೇಳಿದ್ದಾರೆ. ವಾಸ್ತವವಾಗಿ 'ಕ್ಯಾಲ್ಸಿಯಂ' ಒಳಗೊಂಡಿರುವ ತಾಂಬೂಲ ದೈಹಿಕ-ಮಾನಸಿಕ ಆರೋಗ್ಯವನ್ನು ನೀಡುತ್ತದೆ. ಅಲ್ಲದೆ, ಮನುಷ್ಯನಿಗೆ ಮಾನಸಿಕ ತೃಪ್ತಿ ಕುಂಠಿತವಾಗುತ್ತಾ, ದುಶ್ಚಟಗಳಿಗೆ ಆತ ಹೆಚ್ಚೆಚ್ಚು ಬಲಿಯಾಗುತ್ತಾನೆ. ಹೀಗಾಗಿ, ತಂಬಾಕಿನೊಂದಿಗೆ ವೀಳ್ಯ ಒಂದು 'ಒಳ್ಳೆಯ' ದುಶ್ಚಟವಾಗಿರುವುದಲ್ಲದೆ, ಈಗ ಪುನಃ ಅದೇ ಫ್ಯಾಶನ್ ಕೂಡ ಆಗುತ್ತಿದೆ. 'ಬೇಜಾರಾದಾಗ ಮತ್ತೂ ಒಂದು ವೀಳ್ಯ ಜಾಸ್ತಿ!' ಅಂದರೆ ಆಹಾರ ಪದಾರ್ಥಕ್ಕಿಂತ ಹೆಚ್ಚಿನ ಆದ್ಯತೆ ಇದಕ್ಕೆ! ಎಂದ ಮೇಲೆ ಅಡಿಕೆಗೆ ಬೇಡಿಕೆ ಹೆಚ್ಚಲೇ ಬೇಕಷ್ಟೆ?

ಅಡಿಕೆ ಮದ್ದು

ಅಡಿಕೆ ತಿನ್ನುವುದರಿಂದ ರಕ್ತದಲ್ಲಿನ ಸಕ್ಕರೆಯ ಅಂಶ ಕಡಿಮೆಯಾಗುವುದೆಂದು ವಿಟ್ಲದಲ್ಲಿರುವ ಅಡಿಕೆ ಸಂಶೋಧನ ಕೇಂದ್ರದವರು ಕಂಡುಹಿಡಿದಿದ್ದಾರೆ. ಈಚೆಗೆ ಮೊಲಗಳ ಮೇಲೆ ನಡೆಸಿದ ಪ್ರಯೋಗಗಳಿಂದ ಈ ಅಂಶ ವ್ಯಕ್ತಪಟ್ಟಿದೆಯಂತೆ. ಅಡಿಕೆ ತಿನ್ನುವುದು ಕೆಟ್ಟ ಚಾಳಿ ಎಂಬ ತಪ್ಪು ಭಾವನೆಯಿದೆ. ಆದರೆ ಆಯುರ್ವೇದ ವೈದ್ಯರು ಹಿಂದಿನಿಂದಲೂ ಅಡಿಕೆಯನ್ನು ಔಷಧವೆಂದು ಪರಿಗಣಿಸಿದ್ದಾರೆಂದು ಅವರು ತಿಳಿಸಿದ್ದಾರೆ.

ಅಡಿಕೆ ಬೆಳೆಯು ಸುಮಾರು ೨೫ ರಿಂದ ೩೦ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿರುವ ೬೫ ರಿಂದ ೧೩೫ ಅಂಗುಲ ಮಳೆಯಾಗುವ ಭೂಮಿಯಲ್ಲಿ ಮಾತ್ರ ಸಾಧ್ಯವೇ ಹೊರತು ಶೀತವಲಯಗಳಲ್ಲಾಗಲೀ ತೀರಾ ಮೈದಾನ ಪ್ರದೇಶಗಳಲ್ಲಾಗಲೀ ಖಂಡಿತಾ ಬೆಳೆ ಆಗುವುದಿಲ್ಲ. ಎಂದಾಗ ಇದರ ಬೆಳೆ ಸೀಮಿತವೆಂದಂತಾಯಿತು. ಒಂದು ವೇಳೆ ಈಗ ಅಡಿಕೆ ಉಪಯೋಗವಿರುವ ಪ್ರದೇಶಗಳಲ್ಲದೇ ಪಾಶ್ಚಿಮಾತ್ಯ ದೇಶಗಳಿಂದ ಏನಾದರೂ ಬೇಡಿಕೆ ಬಂದರೆ ಆಗ ನಮ್ಮ ಬೆಳೆ ಏನೇನೂ ಸಾಕಾಗುವುದಿಲ್ಲ. ಇದನ್ನು ಗಮನಿಸಿಯೇ ಪಾಕಿಸ್ತಾನ್, ಬ್ರೆಜಿಲ್ ಹಾಗೂ ಇನ್ನಿತರೆಡೆಗಳಲ್ಲಿ ಸೂಕ್ತ ಹವಾಮಾನವಿರುವೆಡೆಗಳಲ್ಲಿ ಅಡಿಕೆಯ ಬಗ್ಗೆ ಗಮನ ಹರಿಸುತ್ತಾ ಇದ್ದಾರೆ. ಬೇಡಿಕೆಯ ಸೂಚನೆಗಳೂ ಬರುತ್ತಾ ಇವೆ.

ಅಡಿಕೆ ಜಗಿದರೆ ಬಾಯಿ ಕ್ಯಾನ್ಸರ್!

ಸದಾ ಅಡಿಕೆ ಜಗಿಯುವುದರಿಂದ ಬಾಯಿ ಕ್ಯಾನ್ಸರ್ ಬರುತ್ತದೆಂದು ವಿಶ್ವ ಆರೋಗ್ಯ ಸಂಸ್ಥೆಯ ಈಚಿನ ವರದಿ ತಿಳಿಸಿದೆ.

ಭಾರತ ಮತ್ತು ಅದರ ನೆರೆಹೊರೆಯಲ್ಲಿ ವ್ಯಾಪಕವಾಗಿರುವ ಅಡಿಕೆ ಜಗಿಯುವ ಅಭ್ಯಾಸವನ್ನು ತಪ್ಪಿಸಿ, ಬಾಯಿಯ ಆರೋಗ್ಯದ ಬಗ್ಗೆ ತಿಳುವಳಿಕೆ ಮೂಡಿಸಲು ತೀವ್ರವಾದ ಪ್ರಚಾರ ಮತ್ತು ಶಿಕ್ಷಣವನ್ನು ಕೈಗೊಳ್ಳಬೇಕು ಎಂದು ಅದು ಸಲಹೆ ಮಾಡಿದೆ.

ಭಾರತವೂ ಸೇರಿದಂತೆ ವಿಶ್ವದ ಬಡರಾಷ್ಟ್ರಗಳಲ್ಲಿ ಪ್ರತಿವರ್ಷ ನಲವತ್ತು ಲಕ್ಷಕ್ಕೂ ಹೆಚ್ಚು ಜನ ವಿವಿಧ ರೀತಿಯ ಕ್ಯಾನ್ಸರಿಗೆ ತುತ್ತಾಗುತ್ತಿದ್ದಾರೆಂದು ವರದಿ ಹೇಳಿದೆ.

ಪ್ರಸಿದ್ಧ ಅರ್ಥಶಾಸ್ತ್ರಜ್ಞರಾಗಿದ್ದ ಡಾ|| ಟಿ. ಎಂ. ಎ. ಪೈ ಒಮ್ಮೆ ಹೇಳಿದ್ದರು- "ನೀವು ಮಲೆನಾಡಿನ ಜನ ತುಂಬ ಹೆಡ್ಡರಿದ್ದೀರಿ. ನಿಮ್ಮ ಪದಾರ್ಥಕ್ಕೆ ಒಳ್ಳೆಯ ಬೇಡಿಕೆ ತಂದುಕೊಳ್ಳಲು ನೀವು ಏನೂ ಶ್ರಮವಹಿಸುತ್ತಿಲ್ಲ. ಸರಿಯಾದ ಪ್ರಚಾರದಿಂದ ಬೇಡಿಕೆಯೇನಾದರೂ ಬಂದರೆ ನಿಮ್ಮ ಬೆಳೆ ಯಾತಕ್ಕೂ ಸಾಲುವುದಿಲ್ಲ. ಲವಂಗ ಧಾರಣೆ ಬಂದರೂ ಬರಬಹುದು." ಅಮೇರಿಕದ ಪ್ರಜೆಯಾಗಿದ್ದ, ಶೃಂಗೇರಿ ಕಾಲೇಜಿನ ಪ್ರಾಧ್ಯಾಪಕರೊಬ್ಬರಿಗೆ ಪ್ರಿಯವಾದ ತಾಂಬೂಲದ ಬಗ್ಗೆ ವರ್ಣಿಸಿದಾಗ ಅವರೂ ವೀಳ್ಯ ಜಗಿಯಲು ಶುರು ಮಾಡಿದ್ದಲ್ಲದೆ ಸ್ವದೇಶಕ್ಕೆ ಹಿಂದಿರುಗುವಾಗ ಏಳೆಂಟು ಕಿಲೊ ಅಡಿಕೆಯನ್ನೂ ತಮ್ಮ ಜತೆ ತೆಗೆದುಕೊಂಡು ಹೋಗಿದ್ದರಂತೆ. ಹೀಗಿರುವಾಗ ಅಡಿಕೆಗೆ ಭವಿಷ್ಯವಿಲ್ಲ ಎಂದು ಹೇಗೆ ಹೇಳುವುದು? ಅಡಿಕೆ ಬೆಳೆಗೆ ಇತ್ತೀಚಿಗೆ ತುಂಬಾ ರೋಗಗಳು ಬರುತ್ತಿವೆ. ಸರ್ಕಾರ ತೃಪ್ತಿಕರವಾದ ಯಾವ ಸಂಶೋಧನೆಯನ್ನೂ ಈವರೆಗೆ ನಡೆಸಿಲ್ಲ. ಎಂದರೆ ತೋಟಗಳು ನಶಿಸುತ್ತಾ ಇವೆ. ಬೇಡಿಕೆ ಬರುವ ಸೂಚನೆಗಳು ಹೆಚ್ಚಾಗುತ್ತಾ ಇವೆ. ಎಂದಾಗ ಧಾರಣೆ ಬಗ್ಗೆ ನಮಗೆ ಚಿಂತೆ ಬೇಡವೇ ಬೇಡ.

ಧಾರಣೆ ಬಗ್ಗೆ ಹೇಳುವಾಗ ಕೆಲವರು ಹೇಳುವುದುಂಟು–"ಇಷ್ಟು ಸಾಕು. ಇನ್ನೂ ಬೇಕು ಎಂದರೆ ಸರಿಯಲ್ಲ." ಎಂಥ ತೃಪ್ತಿ! ವಾಸ್ತವವಾಗಿ ೧೯೩೦ರ ಬೆಲೆ ಸೂಚ್ಯಂಕದ ರೀತ್ಯ ಈವರೆಗಿನ ಹೋಲಿಕೆ ನೋಡಿದಾಗ ಅಡಿಕೆ ೨೬ನೇ ಸ್ಥಾನಕ್ಕೆ ಬರುತ್ತೆ. ಪ್ರಮುಖವಾದ ಸಾಮಾನುಗಳೆಲ್ಲವೂ ತುಟ್ಟಿಯಾಗಿದ್ದದು ನಮ್ಮ ಗಮನಕ್ಕೆ ಬರುವುದೇ ಇಲ್ಲ. ಉದಾಹರಣೆಗೆ, ಹಿಂದಿನವರೇ ಹೇಳುವಂತೆ ಹಿಂದೆ ೧ ಮಣ ಅಡಿಕೆ ಮಾರಿದರೆ (೧೧.೨ ಕಿಲೊ) ಬರುತ್ತಿದ್ದ ಸಾಮಾನನ್ನು ಗಮನಿಸಿ: ೧ ಪಲ್ಲ ಒಳ್ಳೆಯ ಅಕ್ಕಿ, ೨೦೦ ತೆಂಗಿನ ಕಾಯಿಗಳು, ೧ ಡಬ್ಬ ಕೊಬ್ಬರಿ ಎಣ್ಣೆ, ೨೦೦ ಸೇರು

೧೯೬೦ರ ವರೆಗೆ ನಿಯಂತ್ರಿತ ಮಾರುಕಟ್ಟೆಯಿಂದ ಉತ್ಪನ್ನದ ಶೇ. ೧ ಭಾಗ ಹಣವನ್ನು ಬೆಳೆಗಾರರಿಂದ ವಸೂಲು ಮಾಡಲಾಗಿದ್ದು, ಈ ಹಣ ಲಕ್ಷಗಟ್ಟಲೆ ಕೊಳೆಯುತ್ತಾ ಬಿದ್ದಿದೆ. ಇದನ್ನು ಗ್ರಾಮಾಂತರ ಸಾರಿಗೆ ಸೌಕರ್ಯಕ್ಕಾಗಿ ಬಳಸಲು ಸರ್ಕಾರ ಹೇಳಿತ್ತು. ಈವರೆಗೂ ಈ ಹಣ ಬಳಕೆಯಾಗಿಲ್ಲ. ನಾವೂ ಒತ್ತಾಯಿಸಿಲ್ಲ. ಇತರೆಯವರು (ಕೊಬ್ಬರಿ–ಮೆಣಸಿನಕಾಯಿ–ಬೆಲ್ಲ) ಇದರ ಉಪಯೋಗ ಪಡೆದಿದ್ದಾಗಿ ತಿಳಿದಿರುತ್ತೆ. ಈ ಬಗ್ಗೆ ಸಹಾ ನಾವು ಉದಾಸೀನರಾಗಿದ್ದೇವೆ. ಇದಕ್ಕೆ ಏನನ್ನುವುದು?

ಪುರುಳಿ, ೭ ಬೇಲ ಹಿಂಡಿ ಹೀಗೆ ಎಲ್ಲಾ ಸಾಮಾನುಗಳೂ ತೇಜಿಯಾಗಿವೆ. ಈಕೋನದಲ್ಲಿ ನೋಡಿದಾಗ ಅಡಿಕೆಗೆ ಈಗಿರುವ ಧಾರಣೆಯು ಹೆಚ್ಚೇನೂ ಅಲ್ಲ.

ಮೇಲಾಗಿ ನಾವು ಬಳಸುವ ರಸಗೊಬ್ಬರ-ಕಬ್ಬಿಣ ಇವುಗಳೂ ಸಹಾ ಕಮ್ಮಿ ಏನೂ ಇಲ್ಲ. ಮಾರುಕಟ್ಟೆಯಲ್ಲಿ ಧಾರಣೆಯು ಕ್ವಿಂಟಾಲ್ ೧ಕ್ಕೆ ಎನ್ನುವುದಕ್ಕಿಂತ ಕಿಲೋ ೧ಕ್ಕೆ ಎಂದಿದ್ದರೆ ಇಷ್ಟು ದೊಡ್ಡ ಸಂಖ್ಯೆ ಬರುತ್ತಿರಲಿಲ್ಲ ಅಷ್ಟೆ! ಎಂದಾಗ ನಮ್ಮ ಮೌಢ್ಯಕ್ಕೆ ಏನು ಹೇಳೋಣ? ಅಂತೂ ಅಡಿಕೆಯ ಬೆಳೆ ಮುಂದುವರಿಸುವುದರಲ್ಲಿ ಯಾವ ತಪ್ಪೂ ಇಲ್ಲ.

ಧಾರಣೆ ವಿಷಯದಲ್ಲಿ ಇನ್ನೊಂದು ಮಾತು. ಮೆಣಸಿನ ಕಾಯಿ, ತಂಬಾಕು, ದ್ವಿದಳ ಧಾನ್ಯ ಇವುಗಳನ್ನೆಲ್ಲಾ ಬೆಳೆಯುವ ರೈತರು ಸಾಧಾರಣವಾಗಿ ಎಲ್ಲಿ ಹೆಚ್ಚು ಬೆಲೆ ಬರುವುದೋ ಅಲ್ಲಿ ತರುತ್ತಾರೆ. ಉದಾಹರಣೆಗೆ ಮಲೆನಾಡಿನ ಮೂಲೆ ಮೂಲೆಗೂ ಅವರ ಮಾಲು ತಂದು ಮಾರುತ್ತಾರೆ. ಆದರೆ ಅಡಿಕೆಯ ರೈತ ತದ್ವಿರುದ್ಧ. ಚಿಲ್ಲರೆ ಅಂಗಡಿಯಲ್ಲಿ ಕಿಲೋಗೆ ೨೦ರೂ. ನಂತೆ ಬೆಟ್ಟೆ ಅಡಿಕೆಯನ್ನು ಮಾರುತ್ತಾರೆ. ನಾವು ಅವರಿಗೆ ೧೬ ನಂತೆ ಮಾರಲು ತಯಾರಿಲ್ಲ. ಮುಂದಿನಗಳಲ್ಲಿ ೧೪ ರೂಪಾಯಿಗಳಿಗೆ ಕೊಡುತ್ತೇನೆ. ಎಂಥಾ ವಿಪರ್ಯಾಸ! ಇದೂ ಒಂದು ದೊಡ್ಡಸ್ತಿಕೆ ಇರಬಹುದೆ? ಧಾರಣೆಯನ್ನು ಕಡಿಮೆಯಾಗದಂತೆ

(ಕೊನೇ ಪುಟ ನೋಡಿ)

ಓದುಗರ ಪತ್ರಗಳು

ಜನತಾ ಮನೆ: ಫೈನಲ್ ಬಿಲ್ ಆಗಿಲ್ಲ

ಶೃಂಗೇರಿ ತಾ|| ಕಿಗ್ಗ ಹೋಬಳಿ ಸಿರಿಮನೆ ಸುತ್ತಮುತ್ತಲಿನ ಗಿರಿಜನರಿಗೆ ಹಲವು ಜನತಾ ಮನೆಗಳು ದೊರೆತಿವೆ. ಈಬಾಬ್ತು ೨ಗುಂಟೆ ಜಾಗವನ್ನು ಮಂಜೂರುಮಾಡಿಸಿಕೊಳ್ಳುವಂತೆ ಪಿಡಿಒ ಕಚೇರಿಯವರು ತಿಳಿಸಿದ್ದರು. ಅದರಂತೆ ಅದಕ್ಕೆ ಸಂಬಂಧಪಟ್ಟ ದಾಖಲೆ ಎಲ್ಲ ಒದಗಿಸಿದ್ದರೂ ಸಹ ಯಾವ ಆರ್ಡರ್ ಬಂದಿಲ್ಲ. ಮನೆ ಪೂರ್ಣವಾದರೂ ಸಾಗುವಳಿ ಚೀಟಿಯೂ ಬಂದಿಲ್ಲ, ಫೈನಲ್ ಬಿಲ್ ಕೂಡ ಆಗಿಲ್ಲ. ವಿಷಯವನ್ನು ನಮ್ಮ ತಹಸೀಲ್ದಾರ್‌ರವರಿಗೂ ತಿಳಿಸಿದ್ದೇವೆ. ಆದರೂ ಪ್ರಯೋಜನವಾಗಿಲ್ಲ. ಈಗಲಾದರೂ ಈ ಮನೆಗಳು ಪೂರ್ಣ ವ್ಯವಸ್ಥೆ ಆಗುವುದಕ್ಕೆ ಸರ್ಕಾರ ಸಹಕರಿಸಲಿ ಎಂದು ಪ್ರಾರ್ಥಿಸುತ್ತೇವೆ.

ದೇವರ ಹಕ್ಲು ಹೆಚ್. ಕೆ. ನಟರಾಜ

ಈ ಪತ್ರದ ನಕಲನ್ನು ಶೃಂಗೇರಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಪರಾಮರ್ಶೆಗಾಗಿ ೬ ವಾರಗಳ ಹಿಂದೆ ಕಳಿಸಲಾಗಿದೆ. ಉತ್ತರ ಬರಬೇಕಾಗಿದೆ. —ಸಂ.

X X X

ಶೃಂಗೇರಿ ತಹಸೀಲ್ದಾರರಿಂದ ಉತ್ತರ ಬಂದಿದೆ.

ಮಾ. ೭ ರ 'ದೀವಟಿಗೆ'ಯಲ್ಲಿ 'ಜನತಾ ಕಾಲೋನಿ ಒದಗಿಸಿ' ಎಂಬ ಪತ್ರ ಪ್ರಕಟವಾಗಿತ್ತಷ್ಟೆ. ಅದಕ್ಕೆ ಶೃಂಗೇರಿ ತಹಸೀಲ್ದಾರರಿಂದ ಉತ್ತರ ಬಂದಿಲ್ಲ ಎಂದೂ ಪ್ರಕಟವಾಗಿತ್ತಷ್ಟೆ. ತಮಗೆ ಕಳಿಸಿದ್ದ ಆ ಪತ್ರದ ನಕಲನ್ನು ಶೃಂಗೇರಿ ತಹಸೀಲ್ದಾರರು ಮಾ.೧೧ ರಂದು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಕಳಿಸಿದ್ದಾರಂತೆ. ನಮ್ಮ 'ಅರ್ಜಿ'ಯನ್ನು ಕ್ಷೇ. ಅ. ಗೆ ಕಳಿಸಿರುವುದಾಗಿಯೂ, ಅವರೊಡನೆ ಮುಂದಕ್ಕೆ ವ್ಯವಹರಿಸಬೇಕೆಂದೂ ತಿಳಿಸಿದ್ದಾರೆ. ಅವರಿಗೆ ಕೃತಜ್ಞತೆಗಳು. ಆ ಬಗ್ಗೆ ಈಗ ಶೃಂಗೇರಿ ಕ್ಷೇ. ಅ. ಗೆ ಪತ್ರ ಬರೆಯಲಾಗಿದೆ. -ಸಂ

ಈ ಅನ್ಯಾಯವೇಕೆ?

ಈಗ ನಮ್ಮ ರಾಜ್ಯದ ಪ್ರೌಢ ಶಿಕ್ಷಣದಲ್ಲಿ ಸಂಸ್ಕೃತವನ್ನು ೩ನೇ ಭಾಷೆಯ ಸ್ಥಾನಕ್ಕೆ ಇಳಿಸಲಾಗುತ್ತಿದೆ. ಕ್ರಮೇಣ ಇದನ್ನು ತೆಗೆದು ಹಾಕಿದರೂ ಆಶ್ಚರ್ಯವಿಲ್ಲ. ಏಕೆಂದರೆ ಸಂಸ್ಕೃತಕ್ಕೆ ಈ ಅನ್ಯಾಯವಾಗುತ್ತಿರುವಾಗ ಎಲ್ಲೂ ಪ್ರತಿಭಟನೆಯೇ ಇಲ್ಲವಲ್ಲ! ಕನ್ನಡ ನಮ್ಮ ಮಾತೃಭಾಷೆಯೇನೋ ನಿಜ. ಆದರೆ ಕನ್ನಡದ ಮೂಲ ಯಾವುದು, ಎಂದು ಯಾರಿಗೂ ತಿಳಿದಿಲ್ಲವೆ? ಈಗ ಕನ್ನಡದಲ್ಲಿ ಮುದ್ರಣವಾಗಿರುವ ನಮ್ಮ ಶಾಸ್ತ್ರ, ಪುರಾಣ, ಭಗವದ್ಗೀತೆ, ರಾಮಾಯಣ ಮುಂತಾದವುಗಳೆಲ್ಲ ಸಂಸ್ಕೃತದಿಂದ ಬಂದುದ್ದೇ ಅಲ್ಲವೇ?

ಕನ್ನಡದಲ್ಲಿ ಅರ್ಧ ಭಾಗ ಸಂಸ್ಕೃತ-ಆಧಾರಿತ ಪದಗಳೇ ಇಗಿವೆ. ಅಂದರೆ ಸಂಸ್ಕೃತದ ಸತ್ವವನ್ನು ಹೀರಿ ಕನ್ನಡದ ಮಹತ್ವ ಹೆಚ್ಚಿದೆ. ಆದರೆ, ಹಾಗೆ ಹೀರಿಕೊಂಡ ನಂತರ ಸಂಸ್ಕೃತವನ್ನೇಕೆ ಎಸೆಯಬೇಕು? ಅದಕ್ಕೂ ಒಂದು ಸ್ಥಾನಮಾನ ಬೇಡವೇ? ಇದು ಅನ್ಯಾಯವಲ್ಲವೆ?

ಸರ್ಕಾರದ ಒಂದು ಕಾನೂನು ಎಲ್ಲರಿಗೆ ಹಿಡಿಸದಿದ್ದಾಗ, ಅಥವಾ ಬೆಲೆಯೇರಿಕೆಯಂಥ ಸಮಸ್ಯೆಗಳ ಬಗ್ಗೆ ಎಲ್ಲರೂ ಮುಷ್ಕರ ಮಾಡುತ್ತಾರೆ, ಆದರೆ ಈ ರೀತಿ ನಮ್ಮ ಭಾಷೆಯ ಬಗ್ಗೆ ಅನ್ಯಾಯ ನಡೆಯುತ್ತಿರುವಾಗ ಮೌನವೇಕೆ!

ಸಂಸ್ಕೃತ ಪ್ರಥಮ ಭಾಷೆಯಾಗಿದ್ದರೆ, ಅದರ ಪಾಡಿಗೆ ಅದು ಇರುತ್ತದೆ. ಸರ್ಕಾರಕ್ಕೆ ಏನು ತೊಂದರೆ? ಸರ್ಕಾರಕ್ಕಾಗಲೀ ವಿರೋಧಪಕ್ಷದವರಿಗಾಗಲೀ ಈ ವಿಷಯ ಹೊಳೆಯಲಿಲ್ಲವೇಕೆ? ಬೇಡ. ನಾವೇ ಆ ಬಗ್ಗೆ ಚರ್ಚಿಸೋಣ. ಸಂಸ್ಕೃತ ಪ್ರಥಮ ಸ್ಥಾನ ಪಡೆಯುವವರೆಗೂ ನಾವು ಪ್ರತಿಭಟಿಸಿ ನಡೆಸೋಣ. ನಮಗೆ ಸರ್ಕಾರವನ್ನು ಪ್ರಶ್ನಿಸಲು ಹಕ್ಕಿದೆ. ಅದನ್ನು ಚಲಾಯಿಸೋಣ.

ಸಂಸ್ಕೃತಾಭಿಮಾನಿ,
ಎಂ. ಎಸ್. ಸತೀಶ,
ಎರಡನೇ ಪಿ. ಯು. ಸಿ.

ವಿವಿಧ ವಿನೋದಾವಳಿ

["ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ" ದಲ್ಲಿ ಜನ ಸೇವೆಗೆ ಟೊಂಕ ಕಟ್ಟಿನಿಂತ ಜನನಾಯಕರ ಅಪೂರ್ವ ಸಾಧನೆಗಳು]

"ಒದಿತೀನಿ" ......

—ಹೀಗೆಂದವರು ಮಂತ್ರಿ, ಸಮಾಜವಾದಿ ಕಾಗೋಡು ತಿಮ್ಮಪ್ಪನವರು. ಹೇಳಿದ್ದು ಭಾಜಪದ ಎ. ಕೆ. ಸುಬ್ಬಯ್ಯ ಅವರಿಗೆ.

ಆಳುವ ಪಕ್ಷ, ವಿರೋಧಪಕ್ಷ, ಮಸೂದೆ, ಚರ್ಚೆ, ಬೇಡಿಕೆ, ಸಭಾತ್ಯಾಗ, ಸರ್ವಾನುಮತದಿಂದ ಮಸೂದೆ ಅಂಗೀಕಾರ ಇತ್ಯಾದಿ ಇತ್ಯಾದಿ ನೀರಸ ನಾಟಕದ ನಡುವೆ ಮೇಲ್ಕಂಡ ರಸವತ್ತಾದ ದೃಶ್ಯ ಮಾ. ೧೮ ರಂದು ಹೋಗಿದ್ದ ಪ್ರೇಕ್ಷಕರಿಗೆ ಮಾತ್ರ ಲಭ್ಯ.

ಆದರ ಮುಂದಿನ ದೃಶ್ಯ ಯಥಾಪ್ರಕಾರ ನೀರಸ – ಮಂತ್ರಿಗಳಿಂದ 'ಬೇಷರತ್ ಕ್ಷಮಾಯಾಚನೆ'

X X X

ಕಿತ್ತು ಹಾಕಿದರು

ಮಾ.೨೫ ರಂದು ಕರ್ನಾಟಕ ವಿಧಾನ ಪರಿಷತ್ತಿನ ಅಧ್ಯಕ್ಷೆ ಶ್ರೀಮತಿ ಬಸವರಾಜೇಶ್ವರಿ ಇತಿಹಾಸ ಸೃಷ್ಟಿಸಿದರು.

ಸಭೆ ನಡೆಯುತ್ತಿದ್ದ ಸಂದರ್ಭದಲ್ಲಿ [illegible] ಮಾರ್ಷಲ್ ಬಳಗ [illegible] ಗಳನ್ನು ತಾವೇ [illegible] ಕಿತ್ತು ಹಾಕಿದರು! ಇದಕ್ಕೆ ಹಿಂದಿನ ಮೇಲ್ಮನೆ [illegible] ಲೋಕಸಭಾ [illegible] ಹೀಗೇ ಮಾಡಿದ್ದರಂತೆ.

ಎ. ಕೆ. ಸುಬ್ಬಯ್ಯನವರ ಪ್ರಶ್ನೆ— "ನಿಮ್ಮ ಮಾತನ್ನೇ ಕಿತ್ತುಹಾಕಿದಿರಾ? ನಮ್ಮನ್ನೇ ಕಿತ್ತು ಹಾಕಿದರೆ?"

X X X

ಹಿಟ್ಲರ್ ಜಿಂದಾ ಬಾದ್!

ಭಾರತದ ಗೃಹ ಮಂತ್ರಿ ಜೈಲ್‌ಸಿಂಗ್ ಮಾ. ೨೪ ರಂದು ಲೋಕಸಭೆಯಲ್ಲಿ ಸರ್ವಾಧಿಕಾರಿ ಹಿಟ್ಲರನನ್ನು ಹೊಗಳಿ ಭಾಷಣ ಮಾಡಿದರಂತೆ. ಅಧ್ಯಕ್ಷತೆ ವಹಿಸಿದ್ದ ಉಪಾಧ್ಯಕ್ಷ ಲಕ್ಷ್ಮಣನ್ ಕೂಡಲೇ ೨೦ ನಿಮಿಷಗಳ ಕಲಾಪವನ್ನು ದಾಖಲೆಯಿಂದ ಕಿತ್ತು ಹಾಕಿದರಂತೆ.

ಮರುದಿನ ಜೈಲ್, 'ಆ ಮಾತು ಬಾಯ್ತಪ್ಪಿ ಬಂದದ್ದು. ನನ್ನ ಅಭಿಪ್ರಾಯ ಹಾಗಿಲ್ಲ' ಎಂದು 'ಅಧಿಕೃತವಾಗಿ' ಹೇಳಿದರಂತೆ. 'ನಿನ್ನೆ ಬಾಯ್ತಪ್ಪಿತು. ಇವತ್ತು ನಾಲಿಗೆ ಹಿಡಿದಿದೆಯೇ?' ಅಂತ ಬರೆ [illegible] ರಾಗಿದ್ದಾರಂತೆ!

X X X

ತಿಗಣೆ ಜಾತಿ

ಮಾ. ೨೨ ರಂದು ರಾಜ್ಯಸಭೆಯ ಕಲಾಪ ನಡೆಯುತ್ತಿದ್ದಾಗ ಮಾಜಿ, ಗೊರಕೆ ಹೊಡೆಯುತ್ತಿದ್ದ [illegible] ವ್ಯವಹಾರ ಖಾತೆ ಉಪಮಂತ್ರಿ [illegible] ನಾಥ ರಾಯ್ ಅವರಿಗೆ [illegible] ಗುಯಿಗುಟ್ಟುವಿನಿಂದಾಗಿ ಎಚ್ಚರಾಗಿ ಬಿಟ್ಟಿತಂತೆ!

[illegible] ಸದನದ 'ಸೀಟಿನ' ನಡೆಯುತ್ತಿದ್ದಾಗ ಸಚಿವರು [illegible] ಕಾಲ ಕಳೆದರಂತೆ ಪಾಪ!!

ಸದನದಲ್ಲಿ ನಿದ್ರೆ ಮಾಡುವ [illegible] ದರೆ ಗೊರಕೆ ಹೊಡೆಯುವುದು [illegible] ಶಾಸನ ಸಭೆಯಲ್ಲಿ ಸ್ವೀಕರಿಸಿ [illegible] ನೀಡಿದ್ದನ್ನು ಓದಿದ್ದ ಹಾಗೆ [illegible] ಮೇಜವಾನಿ [illegible].

X X X

ಮುದ್ರಣ ಕಾಗದ ಏ.೧ ರಿಂದ ಇನ್ನೂ ದುಬಾರಿ

ಪತ್ರಿಕೆಗಳು ಬಳಸುವ [illegible] ಮುದ್ರಣ ಕಾಗದದ ಬೆಲೆ ಈಗ ಟನ್ನಿಗೆ [illegible] ರೂ. ಇದೆ. ಏಪ್ರಿಲ್‌ನಿಂದ [illegible] ಬೆಲೆ ಇನ್ನೂ ಹೆಚ್ಚಲಿದ್ದು [illegible] [illegible] ಟನ್ನಿಗೆ [illegible] ಆಗಲಿದೆ.

[illegible]

ಸುದ್ದಿ ಸಂಗ್ರಹ

ಬಾಂಗ್ಲಾ ದೇಶದಲ್ಲಿ ಸೈನಿಕ ಕ್ರಾಂತಿ

ಬಾಂಗ್ಲಾ ದೇಶದಲ್ಲಿ ಮಾ.೨೪ರ ರಾತ್ರಿ ಸೈನಿಕ ಕ್ರಾಂತಿ ನಡೆದು ಅಧ್ಯಕ್ಷ ಅಬ್ದುಸ್ ಸತ್ತಾರ್ ಪದಚ್ಯುತರಾಗಿದ್ದಾರೆ. ಸೈನಿಕ ಪಡೆಗಳ ಪ್ರಧಾನ ದಂಡನಾಯಕ ಲೆ|| ಜ|| ಎರ್ಷದ್ ಸಮರ ಆಡಳಿತಗಾರರಾಗಿ ಅಧಿಕಾರವಹಿಸಿಕೊಂಡಿದ್ದಾರೆ.

ಕಳೆದ ಮೇ ತಿಂಗಳಲ್ಲಿ ಆಗಿನ ಅಧ್ಯಕ್ಷ ಜಿಯಾ ಉರ್ ರಹಮಾನರ ಹತ್ಯೆಯ ನಂತರ ಅಧಿಕಾರ ವಹಿಸಿಕೊಂಡ ಸತ್ತಾರ್, ಅನಂತರ ನಡೆದ ಚುನಾವಣೆಯಲ್ಲಿ ಗೆದ್ದು ನವೆಂಬರ್‌ನಲ್ಲಿ ಅಧ್ಯಕ್ಷರಾಗಿದ್ದರು.

ಈಗವರು ಗೃಹಬಂಧನದಲ್ಲಿದ್ದಾರೆ.

ವಿಶ್ವ ಕನ್ನಡ ಮೇಳಕ್ಕೆ ಬಹಿಷ್ಕಾರ?

ಗೋಕಾಕ್ ವರದಿಯನ್ನು ಕೂಡಲೇ ಜಾರಿಗೆ ತರದಿದ್ದರೆ ಮೈಸೂರಿನಲ್ಲಿ ನಡೆಯಲಿರುವ ವಿಶ್ವ ಕನ್ನಡ ಮೇಳಕ್ಕೆ ಬಹಿಷ್ಕಾರ ಹಾಕುವುದಾಗಿ ಮೈಸೂರಿನ ನಾಗರಿಕರ ಬೃಹತ್ ಸಭೆ ಒಮ್ಮತದಿಂದ ತೀರ್ಮಾನಿಸಿದೆ.

ಗೋಕಾಕ್ ವರದಿಯಿಂದ ಮುಸ್ಲಿಮರು, ತಮಿಳರು ಅಥವಾ ಸಂಸ್ಕೃತಕ್ಕೆ ಯಾವುದೇ ಅನ್ಯಾಯವಾಗಿಲ್ಲ. ನೆರೆಯ ಬೇರೆಲ್ಲ ರಾಜ್ಯಗಳಲ್ಲಿರುವಂತೆ ಕರ್ನಾಟಕದಲ್ಲೂ ರಾಜ್ಯ ಭಾಷೆಯನ್ನು ಪ್ರೌಢ ಶಿಕ್ಷಣದಲ್ಲಿ ಎಲ್ಲರೂ ಕಲಿಯುವಂತೆ ಈ ವರದಿ ಅವಕಾಶ ಮಾಡಿಕೊಟ್ಟಿದೆ. ಕ್ಷುದ್ರ ರಾಜಕಾರಣಿಗಳು ಭಾಷಾ ಅಲ್ಪಸಂಖ್ಯಾತರಲ್ಲಿ ಹುಟ್ಟಿಸಿರುವ ಭೀತಿಗೆ ಏನೂ ಕಾರಣವಿಲ್ಲ ಎಂಬುದಾಗಿ ಸಭೆಯಲ್ಲಿ ಮಾತನಾಡಿದ ಭಾಷಣಕಾರರು ಸ್ಪಷ್ಟಪಡಿಸಿದ್ದಾರೆ.

ಎನ್. ಟಿ. ರಾಮರಾವ್ ರಾಜಕೀಯಕ್ಕೆ

ತೆಲುಗಿನ ಜನಪ್ರಿಯ ಸಿನಿಮಾ ನಟ ಎನ್. ಟಿ. ರಾಮರಾವ್ ರಾಜಕೀಯ ಪ್ರವೇಶಿಸಿದ್ದಾರೆ. ಪ್ರಾದೇಶಿಕ ಪಕ್ಷವೊಂದನ್ನು ಅವರು ಇತ್ತೀಚೆಗೆ ರಚಿಸಲಿದ್ದಾರೆ. ಈಗಾಗಲೇ ಆಂಧ್ರ ಕಾಂಗ್ರೆಸ್ಸಿನ ಮೂರು ಎಮ್ಮೆಲ್ಲೆಗಳು ಕಾಂಗ್ರೆಸ್ ಬಿಟ್ಟು ಎನ್.ಟಿ.ಆರ್ ರನ್ನು ಸೇರಿದ್ದಾರೆ.

ಇದರ ಪರಿಣಾಮ ಕರ್ನಾಟಕದ ಮೇಲೂ ಆಗುವುದೆ? ಈಗಾಗಲೇ ಕನ್ನಡದ ಜನಪ್ರಿಯ ನಟರುಗಳನ್ನು ರಾಜಕೀಯಕ್ಕೆ ಪ್ರವೇಶಿಸುವಂತೆ ಅಭಿಮಾನಿಗಳು ಒತ್ತಾಯಿಸುತ್ತಿರುವ ವರದಿಗಳಿವೆ.

ರಾಜಕುಮಾರ್ ತಾವು ರಾಜಕೀಯ ಪ್ರವೇಶಿಸುವುದಿಲ್ಲವೆಂದು ಹಲವು ಸಲ ಹೇಳುತ್ತಿದ್ದರೂ ನಾಳೆ ಹೇಗೆ ಬೀಸುತ್ತದೆಂದು ಹೇಳಲು ಸಾಧ್ಯವಿಲ್ಲ. 'ಜನತೆಯ ಒತ್ತಾಯ ಜಾಸ್ತಿಯಾಗಿ', ಅವರೂ ಒಂದು ಪಕ್ಷ ಕಟ್ಟುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಕಂಗೆಟ್ಟ ಜನರಿಗೆ ಹಗಲುಗನಸು ಕಾಣಲು ಇನ್ನೊಂದು ಹೊಸ ದಾರಿಗೆ ಎಡೆಯಾಯಿತೆ?

ಶಾಸಕರ ಜನವಿರೋಧಿ ನೀತಿಗೆ ಖಂಡನೆ

ಮಾನ್ಯರೇ,

ಮಾ. ೨೧ರಂದು ಕೋಲಾರ ಜಿಲ್ಲೆಯ ದ.ಸಂ.ಸ.ಯ ೯ ಜನ ಕಾರ್ಯಕರ್ತರ ಮೇಲೆ ಹಲ್ಲೆ ಮಾಡಿದ ಶಾಸಕ ಸಿ. ಎಂ. ಆರ್ಮುಗಂ ಬೆಂಬಲಿಗರ ಗೂಂಡಾಗಿರಿಯನ್ನು ಕ.ದ.ಸಂ.ಸ ತೀವ್ರವಾಗಿ ಖಂಡಿಸುತ್ತದೆ.

ದಲಿತರ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಆರ್ಮುಗಂ ಡಾ||ಅಂಬೇಡ್ಕರ್‌ರ ಹೆಸರನ್ನು ಸ್ವಾರ್ಥಕ್ಕೆ ಬಳಸಿಕೊಂಡಿದ್ದಾರೆ. ಇಡೀ ತಮ್ಮ ಕ್ಷೇತ್ರದ ಜನರ ಕಣ್ಣಿಗೆ ಮಣ್ಣೆರಚಿ ನಾನೇ ಆಧುನಿಕ ಅಂಬೇಡ್ಕರ್ ಎಂದು ಮೆರೆಯುತ್ತಿದ್ದಾರೆ. ಇವರ ಸ್ವಾರ್ಥ, ವಂಚನೆ, ದಲಿತ ವಿರೋಧಿ ನೀತಿಯ ಬಣ್ಣ ಬಯಲು ಮಾಡಿದ ಪತ್ರಿಕೆಗಳ ಮತ್ತು ದ.ಸಂ.ಸ. ಯ ಸದಸ್ಯರ ಮೇಲೆ ಕೆಂಡ ಕಾರುತ್ತಿದ್ದಾರೆ. ಫೆ. ೨೭ರಂದು ಇವರ ಗೂಂಡಾಗಳಿಂದ ಸಮಿತಿಯ ಸದಸ್ಯರ ಮೇಲೆ ಹಲ್ಲೆ ನಡೆದಿದ್ದು ಈ ಹಲ್ಲೆಯನ್ನು ಪ್ರತಿಭಟಿಸಿ ಮಾರ್ಚ್ ೨೧ರಂದು ಕೋಲಾರದ ಜಿಲ್ಲಾ ಸಮಿತಿ ಖಂಡನಾ ಸಭೆ, ಮೆರವಣಿಗೆ ಏರ್ಪಡಿಸಿತ್ತು.

ಇದರಿಂದ ತಮ್ಮ ಸ್ವಾಭಿಮಾನಕ್ಕೆ ಧಕ್ಕೆ ಬರುತ್ತಿದೆ ಎಂದು ತಿಳಿದ ಆರ್ಮುಗಂ ಗೂಂಡಾಗಿರಿ ನಡೆಸಿದ್ದಾರೆ. ಯಾವುದೇ ಭಾಷೆಯಲ್ಲೂ ಪೂರ್ಣ ಮಾತನಾಡದೆ ಅರ್ಧಂಬರ್ಧ ಭಾಷೆ ಭಾಷಣ ಮಾಡುತ್ತಾ ದಲಿತ ಸಮೂಹಕ್ಕೆ ಕಳಂಕ ತರುತ್ತಿದ್ದಾರೆ. ಇಂತಹ ಜನ ವಿರೋಧಿಗಳನ್ನು ಸರ್ಕಾರ ಶಿಕ್ಷಿಸದಿರುವುದು ಶೋಚನೀಯ. ಶಾಸಕ ಆರ್ಮುಗಂ ಇಡೀ ದಲಿತರ ಪಾಲಿಗೆ ಮುಳ್ಳಾಗುವ ಮುನ್ನ ಇವರ ಮತ್ತು ಇವರ ಬೆಂಬಲಿಗರ ಗೂಂಡಾವರ್ತನೆಯನ್ನು

(ಕೊನೇ ಕಾಲಂ ನೋಡಿ)

ದಲಿತರ [illegible], [illegible] [illegible] [illegible] [illegible] ಆರ್ಮುಗಂ ಇನ್ನು ಮುಂದೆ [illegible] [illegible] [illegible] [illegible] [illegible] ರಾಜ್ಯ [illegible] [illegible] [illegible] [illegible] [illegible].

ಎನ್. ಡಿ. [illegible], ರಾಜ್ಯ ಸಂಚಾಲಕ, ಕರ್ನಾಟಕ ದಲಿತ ಸಂಘರ್ಷ ಸಮಿತಿ. [illegible]

ಜೀವನಾವಶ್ಯಕ ವಸ್ತುಗಳ ಜಪ್ತಿ
ರೈತಸಂಘದ ಚಳುವಳಿ ಬೆದರಿಕೆ

ಚಿಕ್ಕಮಗಳೂರು: ಭಾರತ ಕಮ್ಯುನಿಸ್ಟ್ ಪಕ್ಷದ ಚಿಕ್ಕಮಗಳೂರು ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಬಿ. ಕೆ. ಸುಂದರೇಶ್ ಒಂದು ಪತ್ರಿಕಾ ಹೇಳಿಕೆ ನೀಡಿ, ಜಿಲ್ಲೆಯಲ್ಲಿ ಮುಖ್ಯವಾಗಿ ಮೂಡಿಗೆರೆ ತಾಲೂಕಿನಲ್ಲಿ ಕಂದಾಯ ಇಲಾಖೆ ಅಧಿಕಾರಿಗಳು ಸಾಲ ಹಾಗೂ ಕಂದಾಯ ವಸೂಲಿ ಹೆಸರಿನಲ್ಲಿ ರೈತರ ಮನೆಗಳಿಂದ ಕಾನೂನಿಗೆ ವಿರುದ್ಧವಾಗಿ ಜೀವನಾವಶ್ಯಕ ವಸ್ತುಗಳನ್ನು ಲೂಟಿ ಮಾಡುತ್ತಿದ್ದಾರೆ. ಗಂಡಸರು ಮನೆಯಲ್ಲಿ ಇಲ್ಲದ ವೇಳೆಯಲ್ಲಿ ಹಳ್ಳಿಗಳಿಗೆ ದಾಳಿ ಮಾಡುವ ಇವರು, ಜಪ್ತಿ ವಿರುದ್ಧ ರಾಜ್ಯದ ಶ್ರೇಷ್ಠ ನ್ಯಾಯಾಲಯ ನೀಡಿರುವ ತಡೆಯಾಜ್ಞೆಯನ್ನು ಧಿಕ್ಕರಿಸಿ ಕಾರ್ಯಾಚರಣೆ ನಡೆಸುತ್ತಿದ್ದಾರೆ ಎಂದು ಆಪಾದಿಸಿದ್ದಾರೆ.

ಸರ್ಕಾರ ತನ್ನ ಈ ನೀತಿಯನ್ನು ನಿಲ್ಲಿಸದಿದ್ದಲ್ಲಿ ಜಿಲ್ಲಾದ್ಯಂತ ರೈತರು ಉಗ್ರ ಚಳುವಳಿ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿರುವ ಅವರು, ಈ ಕ್ರಮಗಳನ್ನು ಎಲ್ಲೆಡೆ, ಪ್ರಜಾಪ್ರಭುತ್ವವಾದಿ ಶಕ್ತಿಗಳು ಏಕ ಕಂಠದಿಂದ ವಿರೋಧಿಸಬೇಕೆಂದು ವಿನಂತಿಸಿದ್ದಾರೆ.

ಆರೋಪ ನಿರಾಕರಣೆ

(ಮೊದಲ ಪುಟದಿಂದ)

ಮಂತ್ರಿಗಳು ಒಂದು ಸಮಾರಂಭಕ್ಕಾಗಿ ಕಮ್ಮರಡಿಗೆ ಹೋಗುತ್ತಿದ್ದಾಗ ಹಾಲ್ಮುತ್ತೂರಿನ ಜನ ಅವರನ್ನು ಊರಿಗೆ ಸ್ವಾಗತಿಸಿ, ಕೊಳವೆ ಬಾವಿಯ ಮಂಜೂರಾತಿ ಕೇಳಿದರು. ಸುತ್ತಮುತ್ತ ನಾಲ್ಕಾರು ಮನೆಗಳು, ಐದಾರು ನಿವೇಶನಗಳು ಇದ್ದ ಈ ಜಾಗದ ಪ್ರಸ್ತಾಪ ಬಂದಾಗ ಮಂತ್ರಿಗಳು ಅದಕ್ಕೆ ಒಪ್ಪಿಗೆ ಕೊಟ್ಟರು. ಅನಂತರ ಬಾವಿಗೆ ತಾಂತ್ರಿಕ ಮಂಜೂರಾತಿ ದೊರೆತು ಭೂಗರ್ಭ ಶಾಸ್ತ್ರಜ್ಞರು ಜಾಗವನ್ನು ಗುರುತು ಮಾಡಿದರು. ಇದರಲ್ಲಿ ಸ್ವಜನ ಪಕ್ಷಪಾತ ಎಲ್ಲಿದೆ ಎಂದು ಅವರ ಪ್ರಶ್ನೆ.

ಇದೇ ವಿಷಯವನ್ನು ಗ್ರಾಮಸ್ಥರು ಮಂತ್ರಿಗಳಿಗೂ ಹೇಳಿದೆ. ಆಗ ಅವರು ಸಮಜಾಯಿಷಿ ಮಾಡಿ, ಪ್ರಕರಣಕ್ಕೆ ಮುಕ್ತಾಯ ಹೇಳಿದರು. ಇದರಲ್ಲಿ ತಲೆ ತಗ್ಗಿಸುವಂಥದ್ದೇನೂ ನಡೆಯಲಿಲ್ಲ ಎಂದೂ ಕೊಲ್ಲಪ್ಪ ಗೌಡರು ಸ್ಪಷ್ಟಪಡಿಸಿದರು.

ಊರಿಗೆ ಆಗುವ ಕೆಲಸವನ್ನು ಪ್ರೋತ್ಸಾಹಿಸುವ ಬದಲು ಹೀಗೆ ಗುಂಪು ಜಗಳ ಎತ್ತಿಕೊಂಡು, ಕೆಲಸಕ್ಕೆ ಅಡ್ಡಿಪಡಿಸುವುದು ಊರಿಗಷ್ಟೇ ಅಲ್ಲ, ದೇಶಕ್ಕೇ ಅಪಾಯಕಾರಿಯಾದುದು. ಜನರು ಇಂಥ ಪ್ರವೃತ್ತಿ ಬಿಟ್ಟು ಊರಿನ ಒಳ್ಳೆಯದಕ್ಕಾಗಿ ದುಡಿಯಬೇಕು ಎಂದೂ ಅವರು ಹೇಳಿದರು.

ತಲಮಕ್ಕಿ ಗ್ರಾ. ಪಂಚಾಯ್ತಿ ಗ್ರಾಮಸಭೆ

ಕುಪ್ಪಗುಂಡಿ: ತಲಮಕ್ಕಿ ಗ್ರಾಮಪಂಚಾಯ್ತಿಯ ೧೯೮೧-೮೨ನೇ ವರ್ಷದ ಗ್ರಾಮಸಭೆಯು ಗ್ರಾಮಪಂಚಾಯ್ತಿ ಅಧ್ಯಕ್ಷ ಪಿ. ಜಿ. ಗುರ್ಜರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ತಾ. ಅ. ಮಂ. ಅಧ್ಯಕ್ಷ ಬಿ. ಜಿ. ಚಿದಂಬರ್ ಮುಖ್ಯ ಅತಿಥಿಗಳಾಗಿದ್ದರು.

ಶಾಲೆ, ಮಹಿಳಾ ಸಮಾಜಗಳ ವಾರ್ಷಿಕೋತ್ಸವ

ನಾರ್ವೆ: ಇಲ್ಲಿನ ಮಾದರಿ ಹಿ.ಪ್ರಾ. ಶಾಲೆ ಹಾಗೂ ಶಾಂತಿ ವನಿತಾಸೇವಾಸಮಾಜಗಳ ವಾರ್ಷಿಕೋತ್ಸವ ಏ. ೭ರಂದು ನಡೆಯುತ್ತದೆ. ಬಿ. ಜಿ. ಚಿದಂಬರ್ ಅಧ್ಯಕ್ಷತೆ ವಹಿಸುತ್ತಾರೆ. ಚಿಕ್ಕಮಗಳೂರು ಉಪವಿಭಾಗಾಧಿಕಾರಿ ಕೆ. ನರಸಿಂಹಯ್ಯ ಬಹುಮಾನ ಮತ್ತು ವಿದ್ಯಾರ್ಥಿವೇತನ ವಿತರಣೆ ಮಾಡುತ್ತಾರೆ.

ಉತ್ತಮೇಶ್ವರಕ್ಕೆ ಆರೋಗ್ಯ ಕೇಂದ್ರ

ಕೊಪ್ಪ: ಉತ್ತಮೇಶ್ವರಕ್ಕೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಸರ್ಕಾರದಿಂದ ಮಂಜೂರಾಗಿದೆ.

ಈ ಸಾಲಿನಿಂದಲೇ ಭಾಗಶಃ ಪ್ರಾರಂಭವಾಗಲಿರುವ ಈ ಘಟಕಕ್ಕೆ ಸಾರ್ವಜನಿಕರು ೨೫ ಸಾವಿರ ರೂ. ಗಳ ವಂತಿಗೆ ನೀಡಬೇಕಾಗಿದೆ.

ಈ ಬಗ್ಗೆ ಒಂದು ಸಮಿತಿ ರಚಿತವಾಗಿದ್ದು ತಾ. ಅ. ಮಂ ಅಧ್ಯಕ್ಷ ಬಿ. ಜಿ. ಚಿದಂಬರ್ ಅದರ ಅಧ್ಯಕ್ಷರಾಗಿದ್ದಾರೆ.

ಡಿಪ್ಲೊಮಾ ಉತ್ತೀರ್ಣರಿಗೆ ನೇಮಕಾತಿ ನಿಯಮ ತಿದ್ದುಪಡಿ

ಕರ್ನಾಟಕ ರಾಜ್ಯದಲ್ಲಿ ವೃತ್ತಿ ಶಿಕ್ಷಣದ ಡಿಪ್ಲೊಮಾದಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಸೂಕ್ತ ಉದ್ಯೋಗಾವಕಾಶ ಕಲ್ಪಿಸುವಂತಾಗಲು ದರ್ಜೆ ಹಾಗೂ ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡುವಂತೆ ಸರ್ಕಾರ ಇಲಾಖಾ ಮುಖ್ಯರಿಗೆ ತಿಳಿಸಿದೆ ಎಂದು ವರದಿಯಾಗಿದೆ.

'ಅಂಕುರ' ಬಳಗದ ಕಾರ್ಯಕ್ರಮ

ಕೊಪ್ಪ: ಇಲ್ಲಿನ ಅಂಕುರ ಬಳಗದ ಆಶ್ರಯದಲ್ಲಿ ಮಾ. ೨೧ ರಂದು ಸ್ಥಳೀಯ ಸಂಗೀತ್ ಮೆಲೋಡೀಸ್ ತಂಡದವರಿಂದ ಹಿತಮಿತವಾದ ಆರ್ಕೆಸ್ಟ್ರಾ ಕಾರ್ಯಕ್ರಮ ನಡೆಯಿತು.

ಜೇನುಪೆಟ್ಟಿಗೆ ಹಂಚಿಕೆ

ಕೊಪ್ಪ: ರಾಜ್ಯ ಸರ್ಕಾರದ ಗಿರಿಜನ ಕಲ್ಯಾಣ ಯೋಜನೆಯ ಆಶ್ರಯದಲ್ಲಿ ೮೩ ಜನ ಗಿರಿಜನರಿಗೆ ಉಚಿತ ಜೇನು ಪೆಟ್ಟಿಗೆಗಳನ್ನು ಅರಣ್ಯ ಉಪ ಸಂರಕ್ಷಣಾಧಿಕಾರಿ ಕೆ. ಸುಂದರ ನಾಯ್ಕ್ ಅವರು ಮಾ. ೨೭ರಂದು ಹಂಚಿದರು. ಇವರೆಲ್ಲ ಜೇನು ಪೋಷಣೆ ತರಬೇತಿ ಪಡೆದವರು.

ಕಟ್ಟಡ ನಿರ್ಮಾಣದಲ್ಲಿದೋಷ ಇಬ್ಬರು ಇಂಜನಿಯರ್‌ರ ಅಮಾನತು

ಕಡೂರು: ಇಲ್ಲಿನ ಎ. ಪಿ. ಎಂ. ಸಿ. ಯ ಉಗ್ರಾಣವನ್ನು ಸರಿಯಾಗಿ ಕಟ್ಟದೆ ಅದರ ನಿರ್ಮಾಣ ಪೂರ್ಣಗೊಳ್ಳುವ ಮೊದಲೆ ಕುಸಿದುಬಿದ್ದುದರ ಹಿನ್ನಲೆಯಲ್ಲಿ ಇದರ ನಿರ್ಮಾಣಕ್ಕೆ ಸಂಬಂಧಿಸಿದ ಇಂಜಿನಿಯರುಗಳಾದ ರಾಮಯ್ಯ ಮತ್ತು ರಾಮಚಂದ್ರ ಎಂಬುವರನ್ನು ಚೀಫ್ ಮಾರ್ಕೆಟಿಂಗ್ ಆಫೀಸರ್ ಅವರು ಇತ್ತೀಚೆಗೆ ಅಮಾನತು ಮಾಡಿರುವುದಾಗಿ ವರದಿಯಾಗಿದೆ.

ಅಂದಗಾರು ರಥೋತ್ಸವ

ಇಲ್ಲಿನ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ವಿವಿಧ ಉತ್ಸವಗಳು ಏ. ೧ರಿಂದ ೫ರ ವರೆಗೆ ನಡೆಯಲಿವೆ. ಏ. ೨ರಂದು ಮಹಾ ರಥೋತ್ಸವ ನಡೆಯುತ್ತದೆ.

ರಾಷ್ಟ್ರೋತ್ಥಾನದ ಕಲ್ಪನೆ ಹಳ್ಳಿಗರಲ್ಲೂ ಮೂಡಬೇಕು

–ಡಾ|| ಸಿ. ಸಿದ್ದಯ್ಯ

ಹರಿಹರಪುರ: "ದೇಶ, ರಾಷ್ಟ್ರಕ್ಕಾಗಿ ದುಡಿವ ಜನ ಪಟ್ಟಣಿಗರು ಮಾತ್ರವಲ್ಲ. ದೇಶ, ಅದರ ಅಭ್ಯುದಯದ ಬಗ್ಗೆ ಹಳ್ಳಿಗರೂ ಯೋಚಿಸಿ ಕಾರ್ಯಪ್ರವೃತ್ತರಾಗಬೇಕು. ಹಳ್ಳಿಗರಿಗೆ ಆ ದಿಶೆಯಲ್ಲಿ ಸೂಕ್ತ ಪ್ರೇರಣೆ ನೀಡಲು ಇಂತಹ ರಾಷ್ಟ್ರೋತ್ಥಾನ ಬಳಗಗಳು ಪ್ರಯತ್ನಪಡಬೇಕು. ಈ ರೀತಿಯ ಉತ್ತಮ ಉದ್ದೇಶದ ಈ ರಾಷ್ಟ್ರೋತ್ಥಾನ ಬಳಗವನ್ನು ಇಲ್ಲಿ ಉದ್ಘಾಟಿಸಲು ಹರ್ಷಿಸುತ್ತೇನೆ" ಎಂದು ಡಾ|| ಸಿ. ಸಿದ್ದಯ್ಯ ಇತ್ತೀಚೆಗೆ ರಾಷ್ಟ್ರೋತ್ಥಾನಬಳಗ ಉದ್ಘಾಟಿಸುತ್ತಾ ತಿಳಿಸಿದರು.

ಬಳಗದ ಅಧ್ಯಕ್ಷ ಡಾ|| ವೆಂಕಟೇಶ್ ಅಧ್ಯಕ್ಷತೆ ವಹಿಸಿದ್ದ ಈ ಕಾರ್ಯಕ್ರಮದಲ್ಲಿ ಸಂಚಾಲಕ ಬಿ. ಕೆ. ಗಣೇಶ್ ಸ್ವಾಗತಿಸಿದರು. ಕೆ. ಜಿ. ಎಸ್. ಶಾಸ್ತ್ರಿ ಪ್ರಾಸ್ತಾವಿಕ ಭಾಷಣ ಮಾಡಿದರು.

ಇಲ್ಲಿನ ಕಿರಿಯ ಕಾಲೇಜು ಪ್ರಾಂಶುಪಾಲ ಸತ್ಯನಾರಾಯಣ ವಂದಿಸಿದರು. ಇದರ ಅಂಗವಾಗಿ ಸ್ಥಳೀಯ ಅಧ್ಯಾಪಕ ಉಮೇಶನಾಯ್ಕರಿಂದ ಗೀತಸಂಧ್ಯಾ ಕಾರ್ಯಕ್ರಮ, ಶಾಲಾ ಮಕ್ಕಳಿಗಾಗಿ ವಿವಿಧ ಗಾಯನಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ರಾಮೋತ್ಸವ

ಮೇಲ್ಕಂಡ ಸ್ಪರ್ಧೆಗಳಲ್ಲಿ ಗೆದ್ದ ಮಕ್ಕಳಿಗೆ ಬಹುಮಾನ ವಿತರಣೆ ಮತ್ತು ಗೀತಸಂಧ್ಯಾ ಕಾರ್ಯಕ್ರಮಗಳೊಡನೆ ಫೆ. ೨೮ರಂದು ರಾಮೋತ್ಸವ ಆಚರಿಸಲಾಗುವುದೆಂದು ಸಂಚಾಲಕರು ತಿಳಿಸಿದ್ದಾರೆ.

ವೇದ ಶಿಕ್ಷಣ ಶಿಬಿರ

ಹರಿಹರಪುರ: ಇಲ್ಲಿನ ಪ್ರಬೋಧಿನೀ ವಿಶ್ವಸ್ಥ ಸಮಿತಿಯ ಆಶ್ರಯದಲ್ಲಿ ಏ. ೧೨ರಿಂದ ಕಳೆದ ವರ್ಷದಂತೆಯೇ ೨೦ ದಿನಗಳ ವೇದಶಿಬಿರ ನಡೆಯಲಿದೆ.

ವೇದ, ಸಂಸ್ಕೃತ, ಪೂಜಾವಿಧಿ, ಪ್ರಾಣಾಯಾಮ, ಆಸನಗಳು ಮುಂತಾದುವನ್ನು ಕಲಿಸುವ ಈ ಶಿಬಿರ ಇಲ್ಲಿನ ಶ್ರೀಮಠದೆದುರಿನ ಪ್ರಬೋಧಿನೀ ಜಮೀನು 'ಚಿತ್ರಕೂಟ'ದಲ್ಲಿ ಹಿಂದಿನ ಗುರುಕುಲ ನೆನಪಿಸುವಂತೆ ನಡೆಯಲಿದೆ. ಶಿಬಿರದಲ್ಲಿ ಭಾಗವಹಿಸುವವರಿಗೆ ಯಾವುದೇ ಶುಲ್ಕವಿಲ್ಲ. ಹೆಚ್ಚಿನ ವಿವರಗಳನ್ನು ವ್ಯವಸ್ಥಾಪಕರಿಂದ ಪಡೆಯಬಹುದು

ಸಿಂಹನಗದ್ದೆ ಬಸ್ತಿಮಠದಲ್ಲಿ ವೈಭವದ ಉತ್ಸವ

ನ. ರಾ. ಪುರ: ಇಲ್ಲಿನ ಸಿಂಹನಗದ್ದೆ ಶ್ರಾವಕ ಕ್ಷೇತ್ರದಲ್ಲಿ ಮಾ ೧೭ರಿಂದ ೨೧ರವರೆಗೆ ವಿವಿಧ ಉತ್ಸವಗಳು ವೈಭವದಿಂದ ನಡೆದವು

ಮಾ. ೨೦ರಂದು ಶ್ರೀ ಜ್ವಾಲಮಾಲಿನಿ ರಥೋತ್ಸವ ಹಾಗೂ ೨೧ರಂದು ಶ್ರೀ ಶಾಂತಿನಾಥ ಸ್ವಾಮಿ ದೇವಾಲಯ ಪ್ರತಿಷ್ಠಾಪನೆಗಳು ನಡೆದವು.

ಕೊಲ್ಲಾಪುರ, ಹುಂಬಚ, ಶ್ರವಣಬೆಳಗೊಳಗಳಿಂದ ಮಠಾಧೀಶರು ಹಾಗೂ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ ಅವರು ವಿಶೇಷ ಆಹ್ವಾನಿತರಾಗಿದ್ದರು. ವೀರೇಂದ್ರ ಹೆಗ್ಗಡೆಯವರನ್ನು ಸನ್ಮಾನಿಸಲಾಯಿತು.

ಹೊಸದಾಗಿ ಸ್ಥಾಪಿಸಲಾಗಿರುವ ಶ್ರೀ ಸಮಂತಭದ್ರ ಜ್ಞಾನಪೀಠಕ್ಕೆ ಕರ್ನಾಟಕ ಜೈನಸಮಾಜದವರು ೧ ಲಕ್ಷ ರೂ. ಗಳ ನಿಧಿ ಸಲ್ಲಿಸಿದರು.

ಶ್ರೀರಾಮೋತ್ಸವ

ಭಂಡಿಗಡಿ: ಇಲ್ಲಿನ ಶ್ರೀತೆಂಗಿನ ಮಠದಲ್ಲಿ ಯುಗಾದಿಯಿಂದ ಏ. ೫ರವರೆಗೆ ಶ್ರೀರಾಮೋತ್ಸವ ನಡೆಯುತ್ತಿದೆ. ಮದ್ರಾಸ್ ಪ್ರವಾಸ ಮುಗಿಸಿ ಹಿಂದಿರುಗಿರುವ ಮಠದ ಸ್ವಾಮಿಗಳೂ ಉತ್ಸವದಲ್ಲಿ ಭಾಗವಹಿಸುವರು.

(೩ನೇ ಪುಟದಿಂದ)

ಅಡಿಕೆ ಬೆಳೆ...

ಸಾಕಷ್ಟು ಶ್ರಮವಹಿಸುತ್ತಿರುವ CAMCO ಸಂಸ್ಥೆಗೆ ನಾವೆಷ್ಟು ಸಹಕಾರ ನೀಡುತ್ತಿದ್ದೇವೆ? ಶೇ. ೩ಕ್ಕಿಂತ ಕಡಿಮೆ ಜನ ಮಾತ್ರ ಅದರಲ್ಲಿ ಹಣ ತೊಡಗಿಸಿದ್ದೇವೆಂದರೆ ಹಾಸ್ಯಾಸ್ಪದವೇ ಸರಿ. ಮುಂದಿನ ಬೆಳೆಗಾಗಿ ಮುಂಗಡ ಹಣ ಪಡೆದ ರೈತ "ಕ್ರಿಯಾ ಧರ್ಮಕ್ಕೆ ಅನುಸಾರವಾಗಿ" ಶೇ. ೩೪ ರಂತೆ ಬಡ್ಡಿ ತೆತ್ತು, ಅಷ್ಟಾದಿಡ್ಡಿ ಬೆಲೆಗೆ ಮಾರಾಟ ಮಾಡಿ, ಮುಂದಿನ ಬೆಳೆಗಾಗಿ ಕೈ ಚಾಚುವ ನಿರ್ಭಾಗ್ಯ ಜನ ಅಡಿಕೆ ಬೆಳೆಗಾರರು ಎಂದರೆ ತಪ್ಪಿಲ್ಲ. ಇಷ್ಟಾದರೂ ಇವರು ರಾಜರು!

ವೈಜ್ಞಾನಿಕವಾಗಿ ತೋಟವನ್ನು ಬೆಳೆಸಿ ಸೂಕ್ತ ಮಾರುಕಟ್ಟೆಗಳನ್ನು ಬಳಸಿಕೊಂಡು ಒಳ್ಳೆಯ ಅಡಿಕೆಯನ್ನು ತಯಾರಿಸಿ ಮಾರುವುದು ಹಾಗೂ ಅಂಧಶ್ರದ್ಧೆಯನ್ನು ಕೈಬಿಟ್ಟು ವಿಚಾರವಂತರಾಗಿ ಕೃಷಿ ಮಾಡಿದರೆ ಅಡಿಕೆ ಬೆಳೆ ಲಾಭದಾಯಕವೇ. ಹೊರತು ಈಗಿರುವಂತೆ ನಡೆದರೆ ವಿನಾಶದತ್ತ ಸರಿಯುವುದು ಖಚಿತ. ಇದಕ್ಕೆ ಸರ್ಕಾರ-ಸಾರ್ವಜನಿಕರ ಪರಸ್ಪರ ಸಹಕಾರ ಮುಖ್ಯ. ಈಗಿರುವ ವಿಚಾರ ಧೋರಣೆಗಳನ್ನು ಬದಲಾಯಿಸಿಕೊಂಡು ಅಡಿಕೆಯ ಬೆಳೆಗಾರರು ಕಾರ್ಯಪ್ರವೃತ್ತರಾಗುವುದು ಸ್ವಂತಕ್ಕೂ ರಾಷ್ಟ್ರಕ್ಕೂ ಕ್ಷೇಮ.

ಸಂಪಾದಕ, ಪ್ರಕಾಶಕ, ಮತ್ತು ಮುದ್ರಕ:
ಸಿರಿಮನೆ ನಾಗರಾಜ್.
ಅಚ್ಚು: ನೇಸರ ಮುದ್ರಣ, ಕೊಪ್ಪ.